ELEMENTS

OF

CANARESE GRAMMAR.

By Rev. C. CAMPBELL, B. A.
MYSORE.

ಕನ್ನಡ ವ್ಯಾಕರಣಸಾರವು.

ಮೈಸೂರಿನಲ್ಲಿರುವ
ಕೇಂಬಲ್ ಅಯ್ಯನವರು ಬರೆದದ್ದು.

BANGALORE:
PRINTED FOR THE SCHOOL BOOK SOCIETY,
THE WESLEYAN MISSION PRESS.
1849.

Price Eight Annas.

[... Ed.] [1000 Cop.

Bazar School

ELEMENTS

OF

CANARESE GRAMMAR.

BY REV. C. CAMPBELL, B. A.
MYSORE.

ಕನ್ನಡ ವ್ಯಾಕರಣಸಾರವು.

ಮೈಸೂರಿನಲ್ಲಿರುವ
ಕೇಂಬಲ್ ಅಯ್ಯನವರು ಬರೆದದ್ದು.

BANGALORE:
PRINTED FOR THE SCHOOL BOOK SOCIETY,
AT THE WESLEYAN MISSION PRESS.
1849.

3d. Ed.] [1000 *Cop.*

CONTENTS.

ORTHOGRAPHY.

ETYMOLOGY.

SYNTAX.

ಸೂಚನೆ.

ಅಕ್ಷರಲಕ್ಷಣ.

ಶಬ್ದಲಕ್ಷಣ.

ಪ್ರಯೋಗಲಕ್ಷಣ.

CANARESE GRAMMAR.

ಕನ್ನಡ ವ್ಯಾಕರಣಸಾರ.

೧. ಕನ್ನಡ ವ್ಯಾಕರಣವು ಕನ್ನಡ ಭಾಷೆಯನ್ನು ಯುಕ್ತವಾಗಿಯೂ ಸ್ಪಷ್ಟವಾಗಿಯೂ ಮಾತನಾಡುವದಕ್ಕೂ ಬರೆಯುವದಕ್ಕೂ ತಿಳಿಸುತ್ತದೆ.

OF LETTERS.

ವರ್ಣಗಳನ್ನು ಕುರಿತು.

೨. ಕನ್ನಡ ಭಾಷೆಯ ವರ್ಣಗಳು ಐವತ್ತುಮೂರು. ಅವು ಯಾವವೆಂದರೆ, ಅ ಆ ಇ ಈ ಉ ಊ ಋ ೠ ಌ ೡ ಎ ಏ ಐ ಒ ಓ ಔ ಅಂ ಅಃ ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ ತ ಥ ದ ಧ ನ ಪ ಫ ಬ ಭ ಮ ಯ ರ ಲ ವ ಶ ಷ ಸ ಹ ಳ ಕ್ಷ ಎಂದು ಐವತ್ತುಮೂರು.

೩. ಇವು ಸ್ವರಗಳೆಂದೂ ವ್ಯಂಜನಗಳೆಂದೂ ಎರಡು ವಿಧವು.

೪. ಅಕಾರ ಮೊದಲು ಔಕಾರದವರಿಗೂ, ಹದಿನಾರು ವರ್ಣಗಳು ಸ್ವರಗಳು.

೫. ಇವು ಹ್ರಸ್ವವೆಂದೂ ದೀರ್ಘವೆಂದೂ ಎರಡು ವಿಧವು.

೬. ಅ ಇ ಉ ಋ ಌ ಎ ಒ, ಈ ಏಳು ಹ್ರಸ್ವಗಳು; ಆ ಈ ಊ ೠ ೡ ಏ ಐ ಓ ಔ, ಈ ಒಂಭತ್ತು ದೀರ್ಘಗಳು.

೭. ಸೊನ್ನೆ ಂ ಎಂಬುವದಕ್ಕೆ ಅನುಸ್ವಾರವೆಂದೂ, ಎರಡು ಸೊನ್ನೆ ಃ ಎಂಬುವದಕ್ಕೆ ವಿಸರ್ಗವೆಂದೂ, ಹೇಳುವದು.

೮. ಕಕಾರ ಮೊದಲು ಳಕಾರದವರಿಗೂ ವ್ಯಂಜನಗಳು.

೯. ಕ್ಷಕಾರವು ಕಕಾರ ಷಕಾರಗಳಿಂದ ಹುಟ್ಟಿದ್ದು.

೧೦. ವರ್ಣಗಳು ಒಂದಕ್ಕೊಂದು ಶೇರಿದರೆ, ರೂಪ ಭೇದವಾಗುತ್ತದೆ; ಹ್ಯಾಗಂದರೆ, ಕ ಕಾ ಕಿ ಕೀ ಕು ಕೂ ಕೃ ಕೄ ಕೆ ಕೇ ಕೈ ಕೊ ಕೋ ಕೌ, ಕ್ಕ ಕ್ಖ ಕ್ಚ ಕ್ಥ ಕ್ಟ ಕ್ಡ ಕ್ಣ ಕ್ತ ಕ್ಧ ಕ್ನ ಕ್ಪ ಕ್ಫ ಕ್ಮ ಕ್ಯ ಕ್ರ ಕರ್ ಕ್ಲ ಕ್ವ ಕ್ಶ ಕ್ಷ ಕ್ಸ ಕ್ಳ ಕ್ಕ್ಷ.

೧೧. ವ್ಯಂಜನಕ್ಕೆ ಬೇರೆ ಸ್ವರ ಶೇರದಿದ್ದರೆ, ಅದಕ್ಕೆ ತಲೆಕಟ್ಟು ಇದ್ದರೂ, ತಲೆಕಟ್ಟು ಇಲ್ಲದಿದ್ದರೂ, ಅಕಾರ ಶೇರಿ ಇದೆ ಎಂದು ತಿಳಿದುಕೊಳ್ಳಬೇಕು. ಉದಾಹರಣೆ. ಕ, ಲ.

೧೨. ಸ್ವರ ಶೇರದ ವ್ಯಂಜನಕ್ಕೆ ಅರ್ಧಾಕ್ಷರವೆಂದು ಹೆಸರು. ಉದಾಹರಣೆ. ಕ್, ಗ್, ಚ್, ಘ್

೧೩. ಒಂದೇಸಾರಿ ನುಡಿಯು ತಕ್ಕದ್ದು ಅದು ಬರೀಸ್ವರವಾಗಲಿ, ಒಂದಕ್ಕೊಂದು ಶೇರಿದ ವರ್ಣವಾಗಲಿ ಅಕ್ಷರವೆಂದು ಹೇಳಲ್ಪಡುವದು. ಉದಾಹರಣೆ. ಓ, ಕ್ರೈ, ತ್ವ, ಮೂರ್ಕ, ಒಂ, ಇತ್ಯಾದಿ.

OF WORDS.

ಶಬ್ದಗಳನ್ನು ಕುರಿತು.

೧೪. ಅರ್ಥವನ್ನು ಕೊಡುವಹಾಗೆ ಅಕ್ಷರಗಳನ್ನು ಕೂಡಿಸಿದರೆ, ಅದು ಶಬ್ದವು. ಉದಾ. ತಲೆ, ಮುಖ, ಶರೀರ, ನಾ, ನೀ, ಅವ, ಓದು, ನದಿ.

೧೫. ಯಾವ ಭಾಷೆಯಲ್ಲಾದರೂ ಸ್ವಂತ ಶಬ್ದಗಳು ಮಾತ್ರ ಪ್ರಯೋಗವಾಗುವದಿಲ್ಲ ; ಎಲ್ಲವುಗಳಲ್ಲಿ ಅನ್ಯ ಭಾಷೆಗಳ ಶಬ್ದಗಳು ಮಿಶ್ರವಾಗಿವೆ.

೧೬. ಹಾಗೆಯೇ ಕನ್ನಡದಲ್ಲಿ ಸಂಸ್ಕೃತ ಹಿಂದುಸ್ತಾನಿ ಮೊದಲಾದ ಭಾಷೆಗಳಿಂದ ಸೇರಿದವುಗಳು ಅನೇಕ ಉಂಟು.

೧೭. ಶುದ್ಧ ಕನ್ನಡವಾದರೆ, ದೇಶ್ಯವೆಂದು ಹೇಳಲ್ಪಡುವದು. ಉದಾ. ಕೆಂಪು, ಕೆನ್ನೆ, ಮನೆ.

೧೮. ಕೆಟ್ಟು ಹೋಗದೆ ಕನ್ನಡ ವಿಭಕ್ತಿಯನ್ನು ಹೊಂದಿರುವ ಸಂಸ್ಕೃತ ಶಬ್ದವು ತತ್ಸಮವೆಂದು ಹೇಳಲ್ಪಡುವದು.

ಉದಾಹರಣೆ.

ಸಂಸ್ಕೃತ —	ದೇವ	ನಾರಿ	ಪುಷ್ಪ
ಕನ್ನಡ —	ದೇವರು	ನಾರಿಯು	ಪುಷ್ಪವು

೧೯. ಸಂಸ್ಕೃತ ಶಬ್ದವು ವಿಕಾರವಾಗಿ ಕನ್ನಡದಲ್ಲಿ ಪ್ರಯೋಗಿಸಲ್ಪಟ್ಟರೆ, ತದ್ಭವವೆಂದು ಹೇಳಲ್ಪಡುವದು. ಉದಾ.

ಸಂಸ್ಕೃತ —	ಅಕ್ಷರ	ಸೂಚಿ
ಕನ್ನಡ —	ಅಕ್ಕರವು	ಸೂಜಿಯು

೨೦. ಹಿಂದುಸ್ತಾನಿ ಮೊದಲಾದ ಭಾಷೆಗಳಿಂದ ಕನ್ನಡದಲ್ಲಿ

ಶೇರಿಸಲ್ಪಟ್ಟದ್ದು ಅನ್ಯದೇಶ್ಯವೆಂದು ಹೇಳಲ್ಪಡುವದು. ಉದಾ. ಹುಕುಂ, ಜಪ್ತಿ, ತಯೊರ್

೨೧. ವ್ಯಾಕರಣಕ್ಕೆ ವಿರೋಧವಾದ ಮಾತು ಗ್ರಾಮ್ಯವೆಂದು ಹೇಳಲ್ಪಡುವದು. ಉದಾ. ಹೂವು ಎಂಬುವದಕ್ಕೆ ಹುವ್ವು. ಪುಸ್ತಕವೆಂಬುವದಕ್ಕೆ ಪಸ್ತಕ. ವಿಚಾರಣೆ ಎಂಬುವದಕ್ಕೆ ಇಸಾರಣೆ. ಮೇಲೆ ಎಂಬುವದಕ್ಕೆ ಮೇಗೆ.

೨೨. ಶಬ್ದಗಳ ಮುಖ್ಯವಾದ ತರಗಳು ಯಾವವಂದರೆ, ನಾಮ ವಾಚಕ, ಗುಣವಾಚಕ, ಸರ್ವನಾಮ, ಕ್ರಿಯಾಪದ, ಅವ್ಯಯ.

೨೩. ಶಬ್ದದ ಮೂಲಾಕ್ಷರಗಳು ಮಾತ್ರ ಇದ್ದರೆ, ಅದಕ್ಕೆ ಪ್ರ ಕೃತಿ ಎಂಬ ಹೆಸರು. ಉದಾ. ಮನುಷ್ಯ, ಕುದರೆ.

೨೪. ಬೇರೆ ಬೇರೆ ಅರ್ಥಗಳನ್ನು ಕೊಡುವಹಾಗೆ, ಪ್ರಕೃತಿ ಯ ಮೇಲೆ ಶೇರುವ ವರ್ಣಗಳಿಗೆ ಪ್ರತ್ಯಯ ಎಂಬ ಹೆಸರು. ಉದಾ. ಕುದುರೆಯು. ಇಲ್ಲಿ ಉ ಪ್ರತ್ಯಯ ಬಂತು.

೨೫. ಪ್ರತ್ಯಯವುಳ್ಳ ಶಬ್ದಕ್ಕೆ ಪದ ಎಂಬ ಹೆಸರು.

೨೬. ಅರ್ಥ ತೀರುವಹಾಗೆ ಪದಗಳನ್ನು ಕೂಡಿಸಿದರೆ, ಅದು ವಾಕ್ಯವು. ಉದಾ. ಆ ಮನೆದೊಡ್ಡದು. ನಾನು ಬರುತ್ತೇನೆ. ಅವನು ಒಳ್ಳೆಯವನು.

೨೭. ಶಬ್ದಗಳ ಪ್ರತ್ಯಯಗಳನ್ನು ಶೇರಿಸುವದರಲ್ಲಿಯೂ ಅ ವುಗಳನ್ನು ಪ್ರಯೋಗಿಸುವದರಲ್ಲಿಯೂ ಸಂಧಿ ಅನೇಕ ಸ್ಥಳಗ ಳಲ್ಲಿ ಬರುತ್ತದೆ. ಆದದರಿಂದ ಶಬ್ದ ಭೇದಗಳನ್ನು ಕಲಿಯುವದಕ್ಕಿಂ ತ ಮುಂಚೆ ಸಂಧಿಯ ನ್ಯಾಯಗಳನ್ನು ಕಲಿಯಬೇಕು.

OF THE JUNCTION OF LETTERS,

ಸಂಧಿಯನ್ನು ಕುರಿತು.

೨೮. ಸಂಧಿಯೆಂದರೆ, ಎರಡು ಅಕ್ಷರಗಳನ್ನು ಎಡೆಬಿಡದೆ ಕೂಡಿಸಿ ಹೇಳುವದು.

೨೯. ಸಂಧಿ ಮಾಡುವದರಲ್ಲಿ ಲೋಪ, ಆಗಮ, ಆದೇಶಗಳು ಬರುತ್ತವೆ.

೩೦. ಒಂದು ವರ್ಣ ಇಲ್ಲದೆ ಹೋಗುವದು ಲೋಪ. ಉದಾ. ಅವನು ಇಲ್ಲ—ಅವನಿಲ್ಲ. ಇಲ್ಲಿ ಅವನು ಎಂಬುವದರಲ್ಲಿ ಉ ಲೋಪವಾಯಿತು.

೩೧. ಎರಡು ವರ್ಣಗಳ ನಡುವೆ ಬರುವದೇ ಆಗಮ. ಉದಾ. ಕೆಲಸ ಇಲ್ಲ—ಕೆಲಸವಿಲ್ಲ. ಇಲ್ಲಿ ವ್, ಆಗಮ ಬಂತು.

೩೨. ಒಂದು ವರ್ಣ ಹೋಗಿ ಅದಕ್ಕೆ ಬದಲಾಗಿ ಬೇರೊಂದು ಬಂದರೆ, ಅದು ಆದೇಶ. ಉದಾ. ಆಡು, ಆಟ, ಇಲ್ಲಿ ಡು ಹೋಯಿತು ; ಟ ಬಂತು, ಆದದರಿಂದ ಡು ಎಂಬ ಅಕ್ಷರಕ್ಕೆ ಟ ಆದೇಶವಾಯಿತು.

JUNCTION OF VOWELS.

ಸ್ವರ ಸಂಧಿ.

33. ಅಕಾರದ ಮೇಲೆ ಸ್ವರ ಬಂದರೆ ಅಕಾರಕ್ಕೆ ಲೋಪ ಬರುತ್ತದೆ. ಉದಾ. ದೊಡ್ಡ ಅಪ್ಪನು, ದೊಡ್ಡಪ್ಪನು. ಅಲ್ಲಿಂದ ಅಲ್ಲಿಗೆ, ಅಲ್ಲಿಂದಲ್ಲಿಗೆ.

OF THE JUNCTION OF LETTERS.

೩೪. ಕೆಲವು ಕಡೆಯಲ್ಲಿ ಅಕಾರದ ಮೇಲೆ ಅಕಾರ ಬಂದರೆ ಎರಡೂ ಲೋಪವಾಗಿ ವ್ಯಂಜನ ಒತ್ತಾಗಿ ಬರುವದು. ಉದಾ. ಮಾಡಿದ ಅದು, ಮಾಡಿದ್ದು.

೩೫. ಆ, ಇ, ಈ, ಎ, ಏ, ಐ, ಇವುಗಳ ಮೇಲೆ ಸ್ವರ ಬಂದರೆ ನಡುವೆ ಯ್ ಕಾರಾಗಮ ಬರುತ್ತದೆ. ಉದಾ. ಕಾ—ಉತ್ತಾನೆ, ಕಾಯುತ್ತಾನೆ; ಆಸ್ತಿ ಇಂದ, ಆಸ್ತಿಯಿಂದ; ಮನೆ ಅಲ್ಲಿ, ಮನೆಯಲ್ಲಿ; ಸ್ತ್ರೀ ಇಂದ, ಸ್ತ್ರೀಯಿಂದ; ಶೇ ಉವದು, ಶೇಯುವದು; ಕೈ ಒಳಗೆ, ಕೈಯೊಳಗೆ.

೩೬. ಕೆಲವು ಕಡೆಯಲ್ಲಿ ಇ, ಎ, ಕಾರಗಳ ಮೇಲೆ ಸ್ವರ ಬಂದರೆ ಅವುಗಳಿಗೆ ಲೋಪವಾಗುತ್ತದೆ. ಉದಾ. ಮನೆಯಲ್ಲಿ ಇದ್ದನು, ಮನೆಯಲ್ಲಿದ್ದನು. ತಂದೆಗೆ ಅಯಿತು, ತಂದೆಗಾಯಿತು.

೩೭. ಕೆಲವು ಕಡೆಯಲ್ಲಿ ಆಗಮವಾದರೂ ಲೋಪವಾದರೂ ಆಗಬಹುದು. ಉದಾ. ಬೆಟ್ಟದಲ್ಲಿ ಏ, ಬೆಟ್ಟದಲ್ಲೇ, ಬೆಟ್ಟದಲ್ಲಿಯೇ; ಕುದುರೆಗೆ—ಊ, ಕುದುರೆಗೂ, ಕುದುರೆಗೆಯೂ.

೩೮. ಉಕಾರದ ಮೇಲೆ ಸ್ವರ ಬಂದರೆ, ಅದಕ್ಕೆ ಲೋಪವಾಗುತ್ತದೆ. ಉದಾ. ಮಗನು ಇಲ್ಲ, ಮಗನಿಲ್ಲ.

೩೯. ಕೆಲವು ಕಡೆಯಲ್ಲಿ ವ್ ಕಾರಾಗಮ ಬರುತ್ತದೆ. ಉದಾ. ಗುರು ಎಂದು, ಗುರುವೆಂದು.

೪೦. ಈ ನ್ಯಾಯಗಳು ದೇಶ್ಯ ಶಬ್ದಗಳಿಗೆ ಆಗುತ್ತವೆ. ತತ್ಸಮ ಶಬ್ದಗಳಾದರೆ, ಸಂಸ್ಕೃತ ನ್ಯಾಯಗಳ ಪ್ರಕಾರ ಸಂಧಿ ಆಗಬೇಕು. ಹ್ಯಾಗಂದರೆ,

OF THE JUNCTION OF LETTERS.

ಅಕಾರದ ಮೇಲೆ ಅಕಾರ ಬಂದರೆ ಆ ಆಗುತ್ತದೆ. ಉದಾ. ಗುಣ ಅತಿಶಯ, ಗುಣಾತಿಶಯ.

ಅಕಾರದ ಮೇಲೆ ಆಕಾರ ಬಂದರೆ ಆ ಆಗುತ್ತದೆ. ಉದಾ. ಪರಿಶುದ್ಧ ಆತ್ಮ, ಪರಿಶುದ್ಧಾತ್ಮ.

ಇಕಾರದ ಮೇಲೆ ಈಕಾರ ಬಂದರೆ ಈ ಆಗುತ್ತದೆ. ಉದಾ. ಕವಿ ಈಶ್ವರ, ಕವೀಶ್ವರ.

ಅಕಾರದ ಮೇಲೆ ಉಕಾರ ಬಂದರೆ ಓ ಆಗುತ್ತದೆ. ಉದಾ. ಸಮುದ್ರ ಉದಕ, ಸಮುದ್ರೋದಕ, ಇತ್ಯಾದಿ.

JUNCTION OF CONSONANTS.

ವ್ಯಂಜನ ಸಂಧಿ.

೪೧. ವ್ಯಂಜನಗಳು ಅನೇಕ ಸ್ಥಳಗಳಲ್ಲಿ ಬಂದಕೊಂಡು ಬದಲಾಗುವವು. ಹ್ಯಾಗಂದರೆ,

ಕ—ಗ—ಆಗುತ್ತದೆ. ಉದಾ. ಮರಕಾಲು, ಮರಗಾಲು.

ತ—ದ—ಆಗುತ್ತದೆ. ಉದಾ. ಹುಲಿ ತೊಗಲು, ಹುಲಿದೊಗಲು.

ಪ—ಬ—ಆಗುತ್ತದೆ. ಉದಾ. ತೊಮ್ ಪತ್ತು, ತೊಂಬತ್ತು.

ಪ—ವ—ಆಗುತ್ತದೆ, ಉದಾ. ನಾಲ್ ಪತ್ತು, ನಾಲ್ವತ್ತು.

ನ್ / ಮ್ } ಂ—ಆಗುತ್ತದೆ. ಉದಾ. { ಹೊನ್ ಬಳೆಯು, ಹೊಂಬಳೆಯು.
ಬೆಮ್ ಬೂದಿ, ಬೆಂಬೂದಿ, ಇತ್ಯಾದಿ.

OF NOUNS.

ನಾಮವಾಚಕಗಳನ್ನು ಕುರಿತು.

೪೨. ನಾಮವಾಚಕವು ಯೊವದೊಂದರ ಹೆಸರನ್ನು ಹೇಳುವದು. ಉದಾ. ಮನುಷ್ಯ, ಮರ, ಪಕ್ಷಿ, ಪಶು, ಬುದ್ಧಿ, ಸುಖ.

೪೩. ನಾಮವಾಚಕಗಳಿಗೆ ಮೂರು ಲಿಂಗಗಳುಂಟು. ಅವು ಯೊವವಂದರೆ, ಪುಲ್ಲಿಂಗವು, ಸ್ತ್ರೀಲಿಂಗವು, ನಪುಂಸಕಲಿಂಗವು. ಪುರುಷರನ್ನು ಹೇಳುವದು ಪುಲ್ಲಿಂಗವು; ಸ್ತ್ರೀಯರನ್ನು ಹೇಳುವದು ಸ್ತ್ರೀಲಿಂಗವು; ಮಿಕ್ಕಾದವುಗಳನ್ನು ಹೇಳುವದು ನಪುಂಸಕಲಿಂಗವು

ಉದಾಹರಣೆ.

ಪುಲ್ಲಿಂಗ.	ಸ್ತ್ರೀಲಿಂಗ.	ನಪುಂಸಕಲಿಂಗ
ಮನುಷ್ಯನು	ಹೆಂಡತಿಯು	ಕುತಿಯು

೪೪. ನಾಮವಾಚಕಗಳಿಗೆ ಏಕವಚನವೆಂದೂ ಬಹುವಚನವೆಂದೂ ಎರಡು ವಚನಗಳುಂಟು. ಏಕವಚನ ಒಂದನ್ನು ಹೇಳುವದು; ಬಹುವಚನ ಅನೇಕವನ್ನು ಹೇಳುವದು.

೪೫. ನಾಮವಾಚಕಗಳಿಗೆ ಎಂಟು ವಿಭಕ್ತಿಗಳುಂಟು. ಯೊವವಂದರೆ, ಪ್ರಥಮೆ, ಸಂಬೋಧನೆ, ದ್ವಿತಿಯ್ಯೆ, ತೃತಿಯ್ಯೆ, ಚತುರ್ಥಿ, ಪಂಚಮಿ, ಷಷ್ಟಿ, ಸಪ್ತಮಿ.

೪೬. ಆ ವಿಭಕ್ತಿಗಳನ್ನು ತೋರಿಸುವ ಪ್ರತ್ಯಯಗಳು ಯೊವವಂದರೆ, ಪ್ರಥಮೆ, ಉ; ಸಂಬೋಧನೆ, ಏ; ದ್ವಿತಿಯ್ಯೆ, ಅ, ಅನ್ನು; ತೃತಿಯ್ಯೆ, ಇಂದ; ಚತುರ್ಥಿ, ಗೆ ಇಗೆ ಅಕ್ಕೆ; ಪಂಚಮಿ, ದೆಸೆಯಿಂದ್ಲ; ಷಷ್ಟಿ, ಅ; ಸಪ್ತಮಿ, ಅಲ್ಲಿ.

OF NOUNS.

೪೭. ಈ ವಿಭಕ್ತಿಗಳ ಹೆಸರುಗಳಿಗೆ ಅರ್ಥವೇನಂದರೆ, ಪ್ರಥಮೆ ಮೊದಲನೇದು. ದ್ವಿತೀಯೆ ಎರಡನೇದು. ತೃತೀಯೆ ಮೂರನೇದು. ಚತುರ್ಥಿ ನಾಲ್ಕನೇದು. ಪಂಚಮಿ ಐದನೇದು. ಷಷ್ಠಿ ಆರನೇದು. ಸಪ್ತಮಿ ಏಳನೇದು. ಇವು ಸಂಸ್ಕೃತ ವ್ಯಾಕರಣದಲ್ಲಿ ಬರುತ್ತವೆ. ಆದದರಿಂದ ಕನ್ನಡ ವ್ಯಾಕರಣದಲ್ಲಿಯೂ ಸೇರಿಸಿದ್ದಾರೆ.

೪೮. ಸಂಬೋಧನೆ ಅಂದರೆ ಕರೆಯುವ ವಿಭಕ್ತಿ. ಸಂಬೋಧನೆಗೆ ಬದಲಾಗಿ ಪ್ರಕೃತಿ ಬರುವದುಂಟು. ಬಂದರೆ ಅದರ ಕಡೆ ಸ್ವರವು ಹ್ರಸ್ವವಾಗಲಿ ದೀರ್ಘವಾಗಲಿ ಇರ ಬಹುದು. ಉದಾ. ಅಪ್ಪ ಅಪ್ಪಾ, ತಂದೆ ತಂದೇ.

---

1. DECLENSION.

೧. ರೂಪ.

೪೯. ಅಕಾರಾಂತ ಪುಲ್ಲಿಂಗದ ನಾಮವಾಚಕಗಳು ೧ನೇರೂಪದ ಪ್ರಕಾರ ವಿಭಕ್ತಿಗಳನ್ನು ಹೊಂದುತ್ತವೆ. ಏಕವಚನದಲ್ಲಿ ನಕಾರಾಗಮವೂ ಬಹು ವಚನದಲ್ಲಿ ಅರ್ ಆಗಮವೂ ಬರುತ್ತವೆ. ಮತ್ತು ಅಪರೂಪವಾಗಿ ಅರುಗಳ್ ಆಗಮ ಬಹುವಚನದಲ್ಲಿ ಬರುವದುಂಟು.

ಉದಾಹರಣೆ.

ವೀರಶಬ್ದ.

	ಏಕವಚನ.	ಬಹುವಚನ.	
ಪ್ರ.	ವೀರನು	ವೀರರು	ವೀರರುಗಳು
ಸಂ.	ವೀರನೇ	ವೀರರೇ	ವೀರರುಗಳೇ
ದ್ವಿ.	ವೀರನ ವೀರನನ್ನು	ವೀರರ ವೀರರನ್ನು	ವೀರರುಗಳ ವೀರರುಗಳನ್ನು

	ಏಕವಚನ.	ಬಹುವಚನ.	
ತೃ.	ವೀರನಿಂದ	ವೀರರಿಂದ	ವೀರರುಗಳಿಂದ
ಚ.	ವೀರನಿಗೆ, ವೀರಗೆ	ವೀರರಿಗೆ	ವೀರರುಗಳಿಗೆ
ಪ.	ವೀರನದೆಸೆಯಿಂದ	ವೀರರದೆಸೆಯಿಂದ	ವೀರರುಗಳದೆಸೆಯಿಂದ
ಷ.	ವೀರನ	ವೀರರ	ವೀರರುಗಳ
ಸ.	ವೀರನಲ್ಲಿ	ವೀರರಲ್ಲಿ	ವೀರರುಗಳಲ್ಲಿ

---

2. DECLENSION.

೨. ರೂಪ.

೫೦. ಅಕಾರಾಂತ ನಪುಂಸಕ ಲಿಂಗದ ನಾಮವಾಚಕಗಳು ೨ನೇ ರೂಪದ ಪ್ರಕಾರ ವಿಭಕ್ತಿಗಳನ್ನು ಹೊಂದುತ್ತವೆ. ಏಕವಚನದಲ್ಲಿ ಪ್ರಥಮೆ, ಸಂಬೋಧನೆ, ದ್ವಿತಿಯ್ಯೆ ವಿಭಕ್ತಿಗಳಿಗೆ ವಕಾರಾಗಮವೂ, ತೃತಿಯ್ಯೆ, ಷಷ್ಟಿ, ಸಪ್ತಮಿವಳಿಗೆ ದಕಾರಾಗಮವೂ ಬರುವವು. ಚತುರ್ಥಿಗೆ ಆಗಮವಿಲ್ಲ. ಬಹುವಚನಗಳಲ್ಲಿ ಗಳ್ ಆಗಮವು ಎಲ್ಲಾ ವಿಭಕ್ತಿಗಳಿಗೆ ಬರುವದು.

ಉದಾಹರಣೆ.

ಗಜ ಶಬ್ದವು.

	ಏಕವಚನ.	ಬಹುವಚನ.
ಪ್ರ.	ಗಜವು	ಗಜಗಳು
ಸಂ.	ಗಜವೇ	ಗಜಗಳೇ
ದ್ವಿ.	ಗಜವ, ಗಜವನ್ನು	ಗಜಗಳ, ಗಜಗಳನ್ನು

ಏಕವಚನ.	ಬಹುವಚನ.
ತೃ. ಗಜದಿಂದ	ಗಜಗಳಿಂದ
ಪ. ಗಜದದೆಸೆಯಿಂದ	ಗಜಗಳದೆಸೆಯಿಂದ
ಚ. ಗಜಕ್ಕೆ	ಗಜಗಳಿಗೆ
ಷ. ಗಜದ	ಗಜಗಳ
ಸ. ಗಜದಲ್ಲಿ	ಗಜಗಳಲ್ಲಿ

---

3. DECLENSION.

೩. ರೂಪ.

೫೧. ಇ, ಈ, ಎ, ಐ, ಕಾರಾಂತ ನಾಮವಾಚಕಗಳು (ಸ್ತ್ರೀ) ಪುಲ್ಲಿಂಗಗಳಲ್ಲಿ ೩ನೇ ರೂಪದಪ್ರಕಾರ ವಿಭಕ್ತಿಗಳನ್ನು ಹೊಂದುತ್ತವೆ. ಏಕವಚನದಲ್ಲಿ ಚತುರ್ಥಿಯಲ್ಲದೆ, ಮಿಕ್ಕಾದ ವಿಭಕ್ತಿಗಳಿಗೆ ಯಕಾರಾಗಮ ಬರುತ್ತದೆ. ಬಹುವಚನದಲ್ಲಿ ಅರ್ ಆಗಮ, ಗಳ್ ಆಗಮ ಬರುವದು. ನಪುಂಸಕವಾದರೆ, ಬಹುವಚನದಲ್ಲಿ ಗಳ್ ಆಗಮ ಮಾತ್ರ ಬರುತ್ತದೆ.

ಉದಾಹರಣೆ.

ಪುಲ್ಲಿಂಗ ಅರಿ ಶಬ್ದ.

ಏಕವಚನ.	ಬಹುವಚನ.
ಪ್ರ. ಅರಿಯು	ಅರಿಗಳು
ಸಂ. ಅರಿಯೇ	ಅರಿಗಳೇ

	ಏಕವಚನ.	ಬಹುವಚನ.
ದ್ವಿ.	ಅರಿಯ, ಅರಿಯನ್ನು	ಅರಿಗಳ, ಅರಿಗಳನ್ನು
ತೃ.	ಅರಿಯಿಂದ	ಅರಿಗಳಿಂದ
ಚ.	ಅರಿಗೆ	ಅರಿಗಳಿಗೆ
ಪ.	ಅರಿಯದೆಸೆಯಿಂದ	ಅರಿಗಳದೆಸೆಯಿಂದ
ಷ.	ಅರಿಯ	ಅರಿಗಳ
ಸ.	ಅರಿಯಲ್ಲಿ	ಅರಿಗಳಲ್ಲಿ

ಸ್ತ್ರೀಲಿಂಗ ಸ್ತ್ರೀ ಶಬ್ದ.

	ಏಕವಚನ.	ಬಹುವಚನ.
ಪ್ರ.	ಸ್ತ್ರೀಯು	ಸ್ತ್ರೀಯರು
ಸಂ.	ಸ್ತ್ರೀಯೇ	ಸ್ತ್ರೀಯರೇ
ದ್ವಿ.	ಸ್ತ್ರೀಯ ಸ್ತ್ರೀಯನ್ನು	ಸ್ತ್ರೀಯರ ಸ್ತ್ರೀಯರನ್ನು
ತೃ.	ಸ್ತ್ರೀಯಿಂದ	ಸ್ತ್ರೀಯರಿಂದ
ಚ.	ಸ್ತ್ರೀಗೆ	ಸ್ತ್ರೀಯರಿಗೆ
ಪ.	ಸ್ತ್ರೀಯದೆಸೆಯಿಂದ	ಸ್ತ್ರೀಯರದೆಸೆಯಿಂದ
ಷ.	ಸ್ತ್ರೀಯ	ಸ್ತ್ರೀಯರ
ಸ.	ಸ್ತ್ರೀಯಲ್ಲಿ	ಸ್ತ್ರೀಯರಲ್ಲಿ

ನಪುಂಸಕ ಕುರಿ ಶಬ್ದ.

	ಏಕವಚನ.	ಬಹುವಚನ.
ಪ್ರ.	ಕುರಿಯು	ಕುರಿಗಳು
ಸಂ.	ಕುರಿಯೇ	ಕುರಿಗಳೇ
ದ್ವಿ.	ಕುರಿಯ, ಕುರಿಯನ್ನು	ಕುರಿಗಳ, ಕುರಿಗಳನ್ನು
ತೃ.	ಕುರಿಯಿಂದ	ಕುರಿಗಳಿಂದ
ಚ.	ಕುರಿಗೆ	ಕುರಿಗಳಿಗೆ
ಪ.	ಕುರಿಯದೆಸೆಯಿಂದ	ಕುರಿಗಳದೆಸೆಯಿಂದ
ಷ.	ಕುರಿಯ	ಕುರಿಗಳ
ಸ.	ಕುರಿಯಲ್ಲಿ	ಕುರಿಗಳಲ್ಲಿ

---

4. DECLENSION.

೪. ರೂಪ.

೩೨. ಉ, ಊ, ಋ, ಓ, ಔ ಕಾರಾಂತ ನಾಮವಾಚಕಗಳು ೪ನೇ ರೂಪದಪ್ರಕಾರ ವಿಭಕ್ತಿಗಳನ್ನು ಹೊಂದುತ್ತವೆ. ಏಕವಚನದಲ್ಲಿ ವಕಾರಾಗಮ ಬರುವದುಂಟು; ಆಗಮ ಬಾರದೆ ಇರುವದುಂಟು. ಕೆಲವು ವಿಭಕ್ತಿಗಳಿಗೆ ಇನ್ ಆಗಮ ಬರ ಬಹುದು. ಬಹುವಚನದಲ್ಲಿ ಗಳ್ ಆಗಮ ಬರುತ್ತದೆ.

೩೩. ಗಂಡಸು, ಹೆಂಗಸು ಶಬ್ದಗಳಿಗೆ ಬಹುವಚನದಲ್ಲಿ ಅರ್ ಆಗಮ ಬರುವದು.

ಉದಾಹರಣೆ

ಗುರು ಶಬ್ದ.

	ಏಕವಚನ.	ಬಹುವಚನ.
ಪ್ರ.	ಗುರುವು	ಗುರುಗಳು
ಸಂ.	ಗುರುವೇ	ಗುರುಗಳೇ
ದ್ವಿ.	ಗುರುವ, ಗುರುವನ್ನು	ಗುರುಗಳ, ಗುರುಗಳನ್ನು
ತೃ.	ಗುರುವಿಂದ, ಗುರುವಿನಿಂದ	ಗುರುಗಳಿಂದ
ಚ.	ಗುರುವಿಗೆ	ಗುರುಗಳಿಗೆ
ಪ.	ಗುರುವಿನದೆಸೆಯಿಂದ	ಗುರುಗಳದೆಸೆಯಿಂದ
ಷ.	ಗುರುವಿನ, ಗುರುವ	ಗುರುಗಳ
ಸ.	ಗುರುವಿನಲ್ಲಿ, ಗುರುವಲ್ಲಿ	ಗುರುಗಳಲ್ಲಿ

ಕೂಸು ಶಬ್ದ.

ಪ್ರ.	ಕೂಸು	ಕೂಸುಗಳು
ಸಂ.	ಕೂಸೇ	ಕೂಸುಗಳೇ
ದ್ವಿ.	ಕೂಸ, ಕೂಸನ್ನು	ಕೂಸುಗಳ, ಕೂಸುಗಳನ್ನು
ತೃ.	ಕೂಸಿಂದ, ಕೂಸಿನಿಂದ	ಕೂಸುಗಳಿಂದ
ಚ.	ಕೂಸಿಗೆ	ಕೂಸುಗಳಿಗೆ
ಪಂ.	ಕೂಸಿನದೆಸೆಯಿಂದ	ಕೂಸುಗಳದೆಸೆಯಿಂದ
ಷ.	ಕೂಸ, ಕೂಸಿನ	ಕೂಸುಗಳ
ಸ.	ಕೂಸಲ್ಲಿ, ಕೂಸಿನಲ್ಲಿ	ಕೂಸುಗಳಲ್ಲಿ

NOUNS OF RELATIONSHIP.

ಬಂಧು ವಾಚಕಗಳು.

೫೪. ಅಕಾರಾಂತ ಬಂಧುವಾಚಕ ಶಬ್ದಕ್ಕೆ ಬಹುವಚನದಲ್ಲಿ ಅಂದಿರ್ ಆಗಮ ಬರುತ್ತದೆ.

ಉದಾಹರಣೆ.

	ಏಕವಚನ.	ಬಹುವಚನ.
ಪ್ರ.	ತಮ್ಮನು	ತಮ್ಮಂದಿರು
ಸಂ.	ತಮ್ಮನೇ	ತಮ್ಮಂದಿರೇ. ಇತ್ಯಾದಿ.

೫೫. ಇದಕ್ಕಪವಾದವು ಮಗ ಶಬ್ದಕ್ಕೆ ಬಹುವಚನದಲ್ಲಿ ಕ್ಕಳ್ ಆದೇಶ ಬರುತ್ತದೆ.

ಉದಾಹರಣೆ.

	ಪುಲ್ಲಿಂಗ.	ಸ್ತ್ರೀಲಿಂಗ.	ನಪುಂಸಕಲಿಂಗ.
ಏಕವಚನ.	ಮಗನು.	ಮಗಳು.	ಮಗುವು.
ಬಹುವಚನ.	ಮಕ್ಕಳು.	ಇತ್ಯಾದಿ.	

೫೬. ಅಮ್ಮ, ಅಕ್ಕ, ಅವ್ವ, ಮೊತರ ಶಬ್ದಗಳಿಗೆ ಏಕವಚನದಲ್ಲಿ ಪುಲ್ಲಿಂಗದ ಹಾಗೆ ರೂಪವಾಗುತ್ತದೆ. ಉದಾ. ಪ್ರ. ಅಮ್ಮನು. ಸಂ. ಅಮ್ಮನೇ. ಇತ್ಯಾದಿ.

OF ADJECTIVES.

ಗುಣವಾಚಕಗಳನ್ನು ಕುರಿತು.

೫೭. ಗುಣವನ್ನು ಹೇಳುವದು ಗುಣವಾಚಕವು. ಉದಾ. ಚಿಕ್ಕ ಹುಡುಗನು. ದೊಡ್ಡ ಮನೆ. ಕರೀ ಕುದುರೆ. ಇವುಗಳಲ್ಲಿ ಚಿಕ್ಕ ದೊಡ್ಡ ಕರಿ ಎಂಬವುಗಳು ಗುಣವಾಚಕಗಳು.

OF ADJECTIVES.

೩೮. ಗುಣವನ್ನಲ್ಲದೆ ವಸ್ತುವನ್ನು ಸಹಿತವಾಗಿ ಹೇಳುವದಕ್ಕೆ ಗುಣವಾಚಕದ ಮೇಲೆ ಮೂರು ಲಿಂಗಗಳ ಪ್ರತ್ಯಯಗಳನ್ನು ಶೇರಿಸ ಬಹುದು.

ಉದಾಹರಣೆ.

ಹಿರಿಯನು	ಹಿರಿಯಳು	ಹಿರಿದು
ಹೊಸಬನು	ಹೊಸಬಳು	ಹೊಸದು, ಹೊಸತು

೩೯. ಇವುಗಳ ಮೇಲೆ ಬಂದ ದುಪ್ರತ್ಯಯ ಅದು ಶಬ್ದವೆಂಬ ಸರ್ವನಾಮದಿಂದ ಬರುತ್ತದೆ. ಆದಕಾರಣ ಅದರ ವಿಭಕ್ತಿಗಳೇ ಆಗುತ್ತವೆ. ಆ ವಿಭಕ್ತಿಗಳು ಮುಂದೆ ತೋರಿಸಲ್ಪಡುವವು.

೪೦. ಗುಣವಾಚಕಗಳಿಗೆ ಆದ, ಆದಂಥ, ಪ್ರತ್ಯಯಗಳು ಬರುತ್ತವೆ. ಮತ್ತು ನಾಮವಾಚಕಗಳಿಗೆ ಆದ, ಆದಂಥ, ಉಳ್ಳ, ಉಳ್ಳಂಥ ಪ್ರತ್ಯಯಗಳನ್ನು ಶೇರಿಸಿದರೆ ಗುಣವಾಚಕಗಳ ಅರ್ಥ ಕೊಡುತ್ತವೆ. ಉದಾ. ಪರಿಶುದ್ಧವಾದ, ಪರಿಶುದ್ಧವಾದಂಥ, ಪಾಪವಾದ, ಪಾಪವಾದಂಥ, ಪಾಪವುಳ್ಳ, ಪಾಪವುಳ್ಳಂಥ.

೪೧. ಲೆಖ್ಖವನ್ನು ಅಳತೆಯನ್ನು ಹೇಳುವ ಶಬ್ದಗಳು ಗುಣವಾಚಕಕ್ಕೆ ಸಮ್ಮಂಧವಾಗಿರುತ್ತವೆ. ಅವು ಯಾವವಂದರೆ ಅನೇಕ, ಕೆಲ, ಇಷ್ಟು, ಅಷ್ಟು, ಎಲ್ಲಾ, ಒಂದು, ಎರಡು, ಮೊದಲಾದವುಗಳು.

೪೨. ಎಲ್ಲಾ ಶಬ್ದವು ಅಳತೆಯನ್ನು ಹೇಳುವ ಕಡೆಯಲ್ಲಿ ಏಕವಚನ ; ಲೆಖ್ಖವನ್ನು ಹೇಳುವ ಕಡೆಯಲ್ಲಿ ನಿತ್ಯ ಬಹುವಚನ.

ಉದಾಹರಣೆ.

ಮನೆಯೆಲ್ಲಾ, ದೇಶವೆಲ್ಲಾ, ಎಲ್ಲಾಜನರು, ಎಲ್ಲರು. ಇತ್ಯಾದಿ.

೪೩. ನಪುಂಸಕ ಲಿಂಗದಲ್ಲಿ ಅಷ್ಟು, ಇಷ್ಟು, ಎಷ್ಟು, ಶಬ್ದಗಳಿಗೆ ವಿಭಕ್ತಿಗಳು ಆಗುತ್ತವೆ.

ಉದಾಹರಣೆ.

ಪ್ರ. ಅಷ್ಟು	ತೃ. ಅಷ್ಟರಿಂದ	ಪ. ಅಷ್ಟರದೆಸೆಯಿಂದ
ದ್ವಿ. ಅಷ್ಟು, ಅಷ್ಟನ್ನು.	ಚ. ಅಷ್ಟಕ್ಕೆ	ಷ. ಅಷ್ಟರ
	ಸ. ಅಷ್ಟರಲ್ಲಿ.	

NUMERALS.

ಸಂಖ್ಯಾವಾಚಕಗಳು.

೬೪. ಒಂದು, ಎರಡು, ಮೂರು; ಒಬ್ಬ, ಇಬ್ಬ, ಮೂವ, ಮೊದಲಾದ ಲೆಖ್ಖದ ಶಬ್ದಗಳ ರೂಪಗಳು ಯೊವವಂದರೆ

೬೫ ಒಬ್ಬ ಶಬ್ದ.

	ಪುಂ. ಏಕ.	ಸ್ತ್ರೀ. ಏಕ.	ಪು. ಸ್ತ್ರೀ. ಬಹು.
ಪ್ರ.	ಒಬ್ಬನು	ಒಬ್ಬಳು	ಒಬ್ಬರು
ದ್ವಿ.	ಒಬ್ಬನ, ಒಬ್ಬನನ್ನು	ಒಬ್ಬಳ, ಒಬ್ಬಳನ್ನು	ಒಬ್ಬರ, ಒಬ್ಬರನ್ನು
ತೃ.	ಒಬ್ಬನಿಂದ	ಒಬ್ಬಳಿಂದ	ಒಬ್ಬರಿಂದ
ಚ.	ಒಬ್ಬನಿಗೆ. ಒಬ್ಬಗೆ	ಒಬ್ಬಳಿಗೆ	ಒಬ್ಬರಿಗೆ
ಪ.	ಒಬ್ಬನದೆಸೆಯಿಂದ	ಒಬ್ಬಳದೆಸೆಯಿಂದ	ಒಬ್ಬರದೆಸೆಯಿಂದ
ಷ.	ಒಬ್ಬನ	ಒಬ್ಬಳ	ಒಬ್ಬರ
ಸ.	ಒಬ್ಬನಲ್ಲಿ	ಒಬ್ಬಳಲ್ಲಿ	ಒಬ್ಬರಲ್ಲಿ

ಇದರ ಬಹುವಚನದಹಾಗೆ ಇಬ್ಬ, ಮೂವ ಮೊದಲಾದ ಶಬ್ದಗಳಿಗೆ ರೂಪವಾಗುತ್ತದೆ; ಅವುಗಳಿಗೆ ಏಕವಚನ ವಿಲ್ಲ.

೬೬. ಒಂದು ಶಬ್ದ.

ಪ್ರ. ಒಂದು ತೃ. ಒಂದರಿಂದ ಪ. ಒಂದರದೆಸೆಯಿಂದ
ದ್ವಿ. ಒಂದು, ಒಂದನ್ನು ಚ. ಒಂದಕ್ಕೆ ಷ. ಒಂದರ
ಸ. ಒಂದರಲ್ಲಿ

ಹೀಗೆ ಎರಡು, ಮೂರು, ನಾಲ್ಕು ಮೊದಲಾದ ಶಬ್ದಗಳು ಆಗುತ್ತವೆ.

೬೭. ಮಗ್ಗಿಯಲ್ಲಿ ಉಕಾರಾಂತವಾದ ಲೆಖ್ಖದ ಶಬ್ದಗಳ ಕಡೆ ಉಕಾರಕ್ಕೆ ಲಕಾರಾಗಮ ಬರುತ್ತದೆ. ಉದಾ. ಎರಡೊಂದ್ಲು ಎರಡು, ಎರಡೆರಡ್ಲು ನಾಲ್ಕು.

PRONOUNS.

ಸರ್ವನಾಮಗಳನ್ನು ಕುರಿತು.

೬೮. ಸರ್ವನಾಮವಂದರೆ ನಾಮವಾಚಕಕ್ಕೆ ಪ್ರತಿಯಾಗಿ ಹೇಳುವ ಶಬ್ದವು ಅದಕ್ಕೆ ಸಂಬೋಧನೆ ಇಲ್ಲ.

೬೯. ಸರ್ವನಾಮಗಳು ಯಾವವಂದರೆ ನಾ, ನೀ, ಅವ, ಇವ, ಆತ, ಈತ, ಆಕೆ, ಈಕೆ, ಅದು, ತಾ, ಯಾವ, ಏನು.

---

೭೦. ನಾ ಶಬ್ದ.

ಏಕವಚನ.	ಬಹುವಚನ.
ಪ್ರ. ನಾನು	ನಾವು
ದ್ವಿ. ನನ್ನ, ನನ್ನನ್ನು	ನಮ್ಮ, ನಮ್ಮನ್ನು

ಏಕವಚನ.	ಬಹುವಚನ.
ತೃ. ನನ್ನಿಂದ	ನಮ್ಮಿಂದ
ಚ. ನನಗೆ	ನಮಗೆ
ಪ. ನನ್ನ ದೆಸೆಯಿಂದ	ನಮ್ಮ ದೆಸೆಯಿಂದ
ಷ. ನನ್ನ	ನಮ್ಮ
ಸ. ನನ್ನಲ್ಲಿ	ನಮ್ಮಲ್ಲಿ

೨೧. ನೀ ಶಬ್ದ.

ಪ್ರ. ನೀನು	ನೀವು
ದ್ವಿ. ನಿನ್ನ, ನಿನ್ನನ್ನು	ನಿಮ್ಮ, ನಿಮ್ಮನ್ನು
ತೃ. ನಿನ್ನಿಂದ	ನಿಮ್ಮಿಂದ
ಚ. ನಿನಗೆ	ನಿಮಗೆ
ಪ. ನಿನ್ನದೆಸೆಯಿಂದ	ನಿಮ್ಮದೆಸೆಯಿಂದ
ಷ. ನಿನ್ನ	ನಿಮ್ಮ
ಸ. ನಿನ್ನಲ್ಲಿ	ನಿಮ್ಮಲ್ಲಿ

೨೨. ಅವ ಶಬ್ದ.

ಪ್ರ. ಅವನು	ಅವರು
ದ್ವಿ. ಅವನ, ಅವನನ್ನು	ಅವರ, ಅವರನ್ನು
ತೃ. ಅವನಿಂದ	ಅವರಿಂದ
ಚ. ಅವನಿಗೆ	ಅವರಿಗೆ

ಏಕವಚನ.	ಬಹುವಚನ.
ಪ. ಅವನ ದೆಸೆಯಿಂದ	ಅವರ ದೆಸೆಯಿಂದ
ಷ. ಅವನ	ಅವರ
ಸ. ಅವನಲ್ಲಿ	ಅವರಲ್ಲಿ

ಹೀಗೆ ಇವ ಶಬ್ದಗಳನ್ನು ಹೇಳಿಕೊಳ್ಳುವದು.

೭೩. ಏಕವಚನದಲ್ಲಿ ಆತ ಈತ ಶಬ್ದಗಳು ಅವನು ಶಬ್ದದ ಹಾಗೆ ರೂಪವಾಗುತ್ತವೆ. ಇವುಗಳಿಗೆ ಬಹುವಚನವಿಲ್ಲ.

೭೪. ಏಕವಚನದಲ್ಲಿ ಆಕೆ ಈಕೆ ಶಬ್ದಗಳಿಗೆ (ಸ್ತ್ರೀ) ಶಬ್ದದಹಾಗೆ ರೂಪವಾಗುತ್ತದೆ. ಇವುಗಳಿಗೆ ಬಹುವಚನವಿಲ್ಲ.

---

೭೫. ಅದು ಶಬ್ದ.

ಏಕವಚನ.	ಬಹುವಚನ.
ಪ್ರ. ಅದು	ಅವು, ಅವುಗಳು
ದ್ವಿ. ಅದ, ಅದನ್ನು	ಅವ, ಅವನ್ನು, ಅವುಗಳ, ಅವುಗಳನ್ನು
ತೃ. ಅದರಿಂದ	ಅವುಗಳಿಂದ
ಚ. ಅದಕ್ಕೆ	ಅವಕ್ಕೆ, ಅವುಗಳಿಗೆ
ಪ. ಅದರ ದೆಸೆಯಿಂದ	ಅವುಗಳ ದೆಸೆಯಿಂದ
ಷ. ಅದರ	ಅವುಗಳ
ಸ. ಅದರಲ್ಲಿ	ಅವುಗಳಲ್ಲಿ

ಹೀಗೆ ಇದು ಶಬ್ದಕ್ಕೆ ವಿಭಕ್ತಿಗಳನ್ನು ಹೇಳಿಕೊಳ್ಳುವದು.

VERBS.

೭೬. ತಾ ಶಬ್ದ.

ಏಕವಚನ.	ಬಹುವಚನ.
ಪ್ರ. ತಾನು	ತಾವು
ದ್ವಿ. ತನ್ನ, ತನ್ನನ್ನು	ತಮ್ಮ, ತಮ್ಮನ್ನು
ತೃ. ತನ್ನಿಂದ	ತಮ್ಮಿಂದ
ಚ. ತನಗೆ	ತಮಗೆ
ಪ. ತನ್ನ ದೆಸೆಯಿಂದ	ತಮ್ಮ ದೆಸೆಯಿಂದ
ಷ. ತನ್ನ	ತಮ್ಮ
ಸ. ತನ್ನಲ್ಲಿ	ತಮ್ಮಲ್ಲಿ

೭೭. ಯಾವ ಏನು ಶಬ್ದಗಳು ಪ್ರಶ್ನೆ ಸರ್ವನಾಮಗಳು

೭೮. ಯಾವ ಶಬ್ದ ಮೂರು ಲಿಂಗಗಳಲ್ಲಿ ಹೇಳಲ್ಪಡುವದು; ಪುಂ ಸ್ತ್ರೀ ಲಿಂಗಗಳಲ್ಲಿ ಅವ ಶಬ್ದದ ಹಾಗೆ ರೂಪವಾಗುತ್ತದೆ; ನಪುಂಸಕದಲ್ಲಿ ಅದು ಶಬ್ದದ ಹಾಗೆ ಆಗುತ್ತದೆ.

೭೯. ಏನು ಶಬ್ದ ನಿತ್ಯ ಏಕವಚನ.

ಪ್ರ. ಏನು ತೃ. ಯಾತರಿಂದ ಪ. ಯಾತರದೆಸೆಯಿಂದ
ದ್ವಿ. ಏನು,ಏನ ಚ. ಯಾತಕ್ಕೆ,ಯಾಕೆ ಷ. ಯಾತರ
ಸ. ಯಾತರಲ್ಲಿ

VERBS.

ಕ್ರಿಯಾಪದಗಳನ್ನು ಕುರಿತು.

೮೦. ಕ್ರಿಯಾಪದವಂದರೆ ಇರೋಣ, ಪಡೋಣ, ಮಾಡೋಣ, ಮೊದಲಾದ ಕ್ರಿಯೆಗಳನ್ನು ಹೇಳುವ ಮಾತು.

VERBS.

೮೧. ಅದರ ಮೂಲಾಕ್ಷರಗಳು ಮಾತ್ರ ಇದ್ದರೆ ಧಾತು ಎಂದು ಹೇಳಲ್ಪಡುವದು.

೮೨. ಎಲ್ಲಾ ಧಾತುಗಳಿಗೆ ಕರ್ತೃ ಉಂಟು ; ಕೆಲವು ಧಾತುಗಳಿಗೆ ಕರ್ಮ ಸಹ ಉಂಟು.

೮೩. ಧಾತು ಹೇಳುವ ಕ್ರಿಯೆಯನ್ನು ಮಾಡುವವನು ಕರ್ತೃ ಉದಾ. ಅವನು ಓದುತ್ತಾನೆ. ಇಲ್ಲಿ ಅವನು ಎಂಬುವದು ಕರ್ತೃ.

೮೪. ಧಾತು ಹೇಳುವ ಕ್ರಿಯೆ ಯಾತರಲ್ಲಿ ಶೇರುವದೋ, ಅದೇ ಕರ್ಮ. ಉದಾ. ಅವನು ಪುಸ್ತಕವನ್ನು ಓದುತ್ತಾನೆ. ಇಲ್ಲಿ ಪುಸ್ತಕವನ್ನು ಎಂಬುವದು ಕರ್ಮ.

೮೫. ಕರ್ಮವುಳ್ಳ ಧಾತು ಸಕರ್ಮ ಧಾತುವೆಂದೂ, ಕರ್ಮವಿಲ್ಲದ ಧಾತು ಅಕರ್ಮ ಧಾತುವೆಂದೂ ಹೇಳಲ್ಪಡುವವು. ಮಾಡು, ಕಟ್ಟು, ಮೊದಲಾದವುಗಳು ಸಕರ್ಮ ಧಾತುಗಳು; ಇರು, ಹೋಗು, ನಡಿ ಮೊದಲಾದವುಗಳು ಅಕರ್ಮ ಧಾತುಗಳು.

೮೬. ಧಾತುಗಳ ಮೇಲೆ ಆಖ್ಯಾತಪ್ರತ್ಯಯಗಳೂ ಅವ್ಯಯಪ್ರತ್ಯಯಗಳೂ ಬರುತ್ತವೆ.

೮೭. ಆಖ್ಯಾತಪ್ರತ್ಯಯವಾದರೆ, ಆಖ್ಯಾತ ರೂಪವೆಂದೂ ಅವ್ಯಯಪ್ರತ್ಯಯವಾದರೆ, ಅವ್ಯಯ ರೂಪವೆಂದೂ ಹೆಸರಾಗುತ್ತದೆ.

೮೮. ಆಖ್ಯಾತ ರೂಪಗಳು ಯಾವವಂದರೆ, ವರ್ತಮಾನ, ಭೂತ, ಭವಿಷ್ಯತ್ತು, ಸಂಶಯ, ವಿಧಿ, ನಿಷೇಧ, ರೂಪಗಳು. ಇವುಗಳಿಗೆ ಪುರುಷಲಿಂಗ ವಚನಗಳ ಭೇದ ಉಂಟು.

VERBS.

೮೯. ಅವ್ಯಯರೂಪಗಳು ಯಾವವಂದರೆ, ಭಾವರೂಪವೂ, ನ್ಯೂನಗಳೂ, ಇವುಗಳಿಗೆ ಪುರುಷಲಿಂಗ ವಚನಗಳ ಭೇದವಿಲ್ಲ.

೯೦. ಕ್ರಿಯಾಪದಗಳಿಗೆ ಮೂರು ಕಾಲಗಳುಂಟು ವರ್ತಮಾನ, ಭೂತ, ಭವಿಷ್ಯತ್ತು.

೯೧. ವರ್ತಮಾನ, ಈಗಿನಕಾಲದಲ್ಲಿ ಆಗುವದನ್ನು ಹೇಳುವದು. ಉದಾ. ಮಾಡುತ್ತಾನೆ.

೯೨. ಭೂತ, ಹೋದಕಾಲದಲ್ಲಿ ಆದದ್ದನ್ನು ಹೇಳುವದು. ಉದಾ. ಮಾಡಿದನು.

೯೩. ಭವಿಷ್ಯತ್ತು, ಮುಂದಿನಕಾಲದಲ್ಲಿ ಆಗುವದನ್ನು ಹೇಳುವದು. ಉದಾ. ಮಾಡುವನು.

೯೪. ಸಂಶಯರೂಪ, ಮುಂದಿನ ಕಾರ್ಯವನ್ನು ಸಂದೇಹವಾಗಿ ಹೇಳುವದು. ಉದಾ. ಮಾಡಿಯಾನು.

೯೫. ವಿಧಿ, ಆಜ್ಞಾಪಿಸುವದನ್ನೂ ಬೇಡುವದನ್ನೂ ಹೇಳುವದು. ಉದಾ. ಮಾಡು.

೯೬. ನಿಷೇಧ, ಇಲ್ಲವೆಂಬ ಅರ್ಥವನ್ನು ಹೇಳುವದು. ಉದಾ. ಮಾಡನು.

೯೭. ಭಾವರೂಪ, ಕಾಲ ಪುರುಷ ಲಿಂಗ ವಚನ ಭೇದವಿಲ್ಲದೆ ಧಾತುವಿನ ಅರ್ಥವನ್ನು ಹೇಳುವದು. ಉದಾ. ಮಾಡ, ಮಾಡಲು, ಮಾಡಲಿಕ್ಕೆ.

೯೮. ನ್ಯೂನ, ಪೂರ್ಣ ಅರ್ಥವಿಲ್ಲದ್ದು.

೯೯. ಅವು ಎರಡು ವಿಧವು ಕ್ರಿಯಾನ್ಯೂನ, ಶಬ್ದನ್ಯೂನ.

VERBS.

೧೦೦. ಕ್ರಿಯೊನ್ಯೂನದ ಅರ್ಥವು ಬೇರೊಂದು ಕ್ರಿಯೊಪದದಿಂದ ಪೂರ್ಣವಾಗುವದು. ಉದಾ. ಮೊಡಿ ಹೋದನು.

೧೦೧. ಶಬ್ದನ್ಯೂನದ ಅರ್ಥವು ನಾಮವಾಚಕದಿಂದಾದರೂ, ಸರ್ವನಾಮದಿಂದಾದರೂ, ಪೂರ್ಣವಾಗುವದು. ಉದಾ. ಮೊಡಿದ ಹುಡುಗನು.

೧೦೨. ಕ್ರಿಯೊಪದಗಳಿಗೆ ಮೂರು ಪುರುಷಗಳುಂಟು; ಪ್ರಥಮ, ಮಧ್ಯಮ, ಉತ್ತಮ. ಪ್ರಥಮ ಪುರುಷ ಅವನು, ಅವಳು, ಅದು. ಮಧ್ಯಮ ಪುರುಷ ನೀನು. ಉತ್ತಮ ಪುರುಷ ನಾನು.

೧೦೩. ಉತ್ತಮ ಮಧ್ಯಮ ಪುರುಷಗಳಿಗೆ ಲಿಂಗ ಭೇದವಿಲ್ಲ. ಪ್ರಥಮ ಪುರುಷಕ್ಕೆ ಮೂರು ಲಿಂಗ ಉಂಟು. ಪುಂ ಸ್ತ್ರೀಲಿಂಗಗಳಿಗೆ ಬಹುವಚನದಲ್ಲಿ ಭೇದವಿಲ್ಲ.

೧೦೪. ಪ್ರಥಮ ಪುರುಷ ಅಂದರೆ ಮೊದಲನೇದು. ಯೊತಕ್ಕಂದರೆ ಸಂಸ್ಕೃತ ವ್ಯಾಕರಣದಲ್ಲಿ ಮೊದಲು ಬರುವದು.

೧೦೫. ಮೇಲೆ ಹೇಳಿರುವ ರೂಪಗಳನ್ನು ತೋರಿಸತಕ್ಕ ಪ್ರತ್ಯಯಗಳನ್ನು ಧಾತುಗಳ ಮೇಲೆ ಸೇರಿಸುವದರಲ್ಲಿ ಕೆಲವು ಲೋಪ ಆದೇಶ ಆಗಮಗಳು ಬರುತ್ತವೆ. ಹ್ಯಾಗಂದರೆ, ಉಕಾರಾಂತ ಧಾತುಗಳಾದರೆ, ಮೊಡು ಧಾತುವಿನ ಹಾಗೆಯೂ, ಇ, ಮೊದಲಾದ ಅಂತಗಳಾದರೆ, ನುಡಿ ಧಾತುವಿನ ಹಾಗೆಯೂ ಆಗುತ್ತವೆ.

VERBS.

೧೦೬. ಮಾಡು ಧಾತು.

ಆಖ್ಯಾತರೂಪಗಳು.

ವರ್ತಮಾನ ಕಾಲ. *Present Tense*

ಏಕವಚನ. *Singular*

ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.		
ಉತ್ತ.		ಮಾಡ್	ಉತ್ತ್	ಏನೆ	ಮಾಡುತ್ತೇನೆ	*I do*
ಮಧ್ಯ.		ಮಾಡ್	ಉತ್ತ್	ಈ	ಮಾಡುತ್ತೀ	*thou dost*
ಪ್ರಥ.	ಪು.	ಮಾಡ್	ಉತ್ತ್	ಆನೆ	ಮಾಡುತ್ತಾನೆ	*he does*
	ಸ್ತ್ರೀ.	ಮಾಡ್	ಉತ್ತ್	ಆಳೆ	ಮಾಡುತ್ತಾಳೆ	*she does*
	ನ.	ಮಾಡ್	ಉತ್ತ್	ಅದೆ	ಮಾಡುತ್ತದೆ	*it does*

ಬಹುವಚನ. *Plural*

ಉತ್ತ.		ಮಾಡ್	ಉತ್ತ್	ಏವೆ	ಮಾಡುತ್ತೇವೆ	*we do*
ಮಧ್ಯ.		ಮಾಡ್	ಉತ್ತ್	ಈರಿ	ಮಾಡುತ್ತೀರಿ	*ye or you do*
ಪ್ರಥ.	ಪು. ಸ್ತ್ರೀ.	ಮಾಡ್	ಉತ್ತ್	ಆರೆ	ಮಾಡುತ್ತಾರೆ	*they (m. & f.) do*
	ನ.	ಮಾಡ್	ಉತ್ತ್	ಅವೆ	ಮಾಡುತ್ತವೆ	*they (n.) do*

VERBS.

Past tense ಭೂತಕಾಲ.

ಏಕವಚನ.

	ಪುರುಷ.	ಲಿಂಗ.	ಧಾತು.	ಆದೇಶ.	ಆಗಮ.	ಪ್ರತ್ಯ.	
I did	ಉತ್ತ.		ಮಾಡ್	ಇ	ದ್	ಎನು	ಮಾಡಿದೆನು
thou didst	ಮಧ್ಯ.		ಮಾಡ್	ಇ	ದ್	ಇ	ಮಾಡಿದಿ
he, she or it did.	ಪ್ರಥ.	ಪುಂ.	ಮಾಡ್	ಇ	ದ್	ಅನು	ಮಾಡಿದನು
		ಸ್ತ್ರೀ.	ಮಾಡ್	ಇ	ದ್	ಅಳು	ಮಾಡಿದಳು
		ನ.	ಮಾಡ್			ಇತು	ಮಾಡಿತು

ಬಹುವಚನ.

we did	ಉತ್ತ.		ಮಾಡ್	ಇ	ದ್	ಎವು	ಮಾಡಿದೆವು
ye did	ಮಧ್ಯ.		ಮಾಡ್	ಇ	ದ್	ಇರಿ	ಮಾಡಿದಿರಿ
they did	ಪ್ರಥ.	ಪುಂ. ಸ್ತ್ರೀ.	ಮಾಡ್	ಇ	ದ್	ಅರು	ಮಾಡಿದರು
		ನ.	ಮಾಡ್	ಇ	ದ್	ಅವು	ಮಾಡಿದವು

Future tense ಭವಿಷ್ಯತ್ಕಾಲ.

ಏಕವಚನ.

	ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.	
I will do	ಉತ್ತ.		ಮಾಡ್	ಉವ್	ಎನು	ಮಾಡುವೆನು
thou wilt do	ಮಧ್ಯ.		ಮಾಡ್	ಉವ್	ಇ	ಮಾಡುವಿ
he, she, or it will do	ಪ್ರಥ.	ಪುಂ.	ಮಾಡ್	ಉವ್	ಅನು	ಮಾಡುವನು
		ಸ್ತ್ರೀ.	ಮಾಡ್	ಉವ್	ಅಳು	ಮಾಡುವಳು
		ನ.	ಮಾಡ್	ಉವ್	ಅದು	ಮಾಡುವದು

ಬಹುವಚನ.

ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.		
ಉತ್ತ.		ಮಾಡ್	ಉವ್	ಎವು	ಮಾಡುವೆವು	we will do
ಮಧ್ಯ.		ಮಾಡ್	ಉವ್	ಇರಿ	ಮಾಡುವಿರಿ	ye will do
ಪ್ರಥ	ಪು. ಸ್ತ್ರೀ.	ಮಾಡ್	ಉವ್	ಅರು	ಮಾಡುವರು	they will do
	ನ.	ಮಾಡ್	ಉವ್	ಅವು	ಮಾಡುವವು	

ಸಂಶಯ ರೂಪ.

ಏಕವಚನ.

ಪುರುಷ	ಲಿಂಗ.	ಧಾತು.	ಆದೇಶ.	ಆಗಮ.	ಪ್ರತ್ಯ.		
ಉತ್ತ.		ಮಾಡ್	ಇ	ಯ್	ಏನು	ಮಾಡಿಯೇನು	I will do
ಮಧ್ಯ.		ಮಾಡ್			ಈಯೆ	ಮಾಡೀಯೆ	thou wilt do
ಪ್ರಥ.	ಪು.	ಮಾಡ್	ಇ	ಯ	ಆನು	ಮಾಡಿಯಾನು	he
	ಸ್ತ್ರೀ.	ಮಾಡ್	ಇ	ಯ	ಆಳು	ಮಾಡಿಯಾಳು	she
	ನ.	ಮಾಡ್			ಈತು	ಮಾಡೀತು	it will do

ಬಹುವಚನ.

ಉತ್ತ.		ಮಾಡ್	ಇ	ಯ್	ಏವು	ಮಾಡಿಯೇವು	we will do
ಮಧ್ಯ.		ಮಾಡ್			ಈರಿ	ಮಾಡೀರಿ	ye will do
ಪ್ರಥ.	ಪುಂ. ಸ್ತ್ರೀ.	ಮಾಡ್	ಇ	ಯ	ಆರು	ಮಾಡಿಯಾರು	they will do
	ನ.	ಮಾಡ್	ಇ	ಯ	ಆವು	ಮಾಡಿಯಾವು	

VERBS.

ನಿಷೇಧ.

ಏಕವಚನ.

ಪುರುಷ.	ಲಿಂಗ.	ಧಾತು.	ಪ್ರತ್ಯಯ.	
ಉತ್ತ.		ಮಾಡ್	ಎನು	ಮಾಡೆನು
ಮಧ್ಯ.		ಮಾಡ್	ಎ	ಮಾಡೆ
ಪ್ರಥ.	ಪು.	ಮಾಡ್	ಅನು	ಮಾಡನು
	ಸ್ತ್ರೀ.	ಮಾಡ್	ಅಳು	ಮಾಡಳು
	ನ.	ಮಾಡ್	ಅದು	ಮಾಡದು

ಬಹುವಚನ.

ಉತ್ತ.		ಮಾಡ್	ಎವು	ಮಾಡೆವು
ಮಧ್ಯ.		ಮಾಡ್	ಅರಿ	ಮಾಡರಿ
ಪ್ರಥ.	ಪು. ಸ್ತ್ರೀ.	ಮಾಡ್	ಅರು	ಮಾಡರು
	ನ.	ಮಾಡ್	ಅವು	ಮಾಡವು

ವಿಧಿ.

ಏಕವಚನ.

ಉತ್ತ.		ಮಾಡ್	ಅಲಿ	ಮಾಡಲಿ
ಮಧ್ಯ.		ಮಾಡ್	ಉ	ಮಾಡು
ಪ್ರಥ.	ಪು. ಸ್ತ್ರೀ. ನ.	ಮಾಡ್	ಅಲಿ	ಮಾಡಲಿ

ಬಹುವಚನ.

ಪುರುಷ.	ಲಿಂಗ.	ಆಗಮ.	ಪ್ರತ್ಯಯ.	
ಉತ್ತ.		ಉವ್	ಅ, ಓಣ	ಮಾಡುವ, ಮಾಡೋಣ *let us do*
ಮಧ್ಯ.			ಇ, ಇರಿ	ಮಾಡಿ, ಮಾಡಿರಿ *do ye*
ಪ್ರಥ.	ಪು. ಸ್ತ್ರೀ. ನ.		ಅಲಿ	ಮಾಡಲಿ *let them do*

ಅವ್ಯಯರೂಪಗಳು.

ಭಾವರೂಪ.

ಧಾತು.	ಪ್ರತ್ಯಯ.		
ಮಾಡ್	ಅ	ಮಾಡ	*to do*
	ಅಲು	ಮಾಡಲು	
	ಅಲಿಕ್ಕೆ	ಮಾಡಲಿಕ್ಕೆ	

ಕ್ರಿಯಾನ್ಯೂನ.

ಕಾಲ.	ಧಾತು.	ಪ್ರತ್ಯಯ.		
ವರ್ತ. *Pres.*	ಮಾಡ್	ಉತ್ತಾ	ಮಾಡುತ್ತಾ	*doing*
ಭೂತ. *Past*	ಮಾಡ್	ಇ	ಮಾಡಿ	*having done*
ನಿಷೇ. *Aorist*	ಮಾಡ್	ಅದೆ	ಮಾಡದೆ	*not having done*

ಶಬ್ದನ್ಯೂನ. *Participles*

ವರ್ತ. ಭವಿ. *future*	ಮಾಡ್	ಉವ	ಮಾಡುವ	*that will do*
ಭೂತ.	ಮಾಡ್	ಇದ	ಮಾಡಿದ	*that did*
ನಿಷೇ. *Aorist*	ಮಾಡ್	ಅದ	ಮಾಡದ	*that will not do*

that do not, did not or will not do

೧೦೩. ನುಡಿ ಧಾತು.

ಆಖ್ಯಾತರೂಪಗಳು.

ವರ್ತಮಾನ ಕಾಲ.

ಏಕವಚನ.

	ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.	
I say	ಉತ್ತ.		ನುಡಿ	ಯ, ಉತ್ತ	ಏನೆ	ನುಡಿಯುತ್ತೇನೆ
thou sayest	ಮಧ್ಯ.		ನುಡಿ	ಯ, ಉತ್ತ	ಈ	ನುಡಿಯುತ್ತೀ
he, she it says	ಪ್ರಥ.	ಪು.	ನುಡಿ	ಯ, ಉತ್ತ	ಆನೆ	ನುಡಿಯುತ್ತಾನೆ
	ಪ್ರಥ.	ಸ್ತ್ರೀ.	ನುಡಿ	ಯ, ಉತ್ತ	ಆಳೆ	ನುಡಿಯುತ್ತಾಳೆ
	ಪ್ರಥ.	ನ.	ನುಡಿ	ಯ, ಉತ್ತ	ಅದೆ	ನುಡಿಯುತ್ತದೆ

ಬಹುವಚನ.

	ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.	
we say	ಉತ್ತ.		ನುಡಿ	ಯ, ಉತ್ತ	ಏವೆ	ನುಡಿಯುತ್ತೇವೆ
	ಮಧ್ಯ.		ನುಡಿ	ಯ, ಉತ್ತ	ಈರಿ	ನುಡಿಯುತ್ತೀರಿ
	ಪ್ರಥ.	ಪು., ಸ್ತ್ರೀ.	ನುಡಿ	ಯ, ಉತ್ತ	ಆರೆ	ನುಡಿಯುತ್ತಾರೆ
	ಪ್ರಥ.	ನ.	ನುಡಿ	ಯ, ಉತ್ತ	ಅವೆ	ನುಡಿಯುತ್ತವೆ

VERBS.

ಭೂತಕಾಲ.

ಏಕವಚನ.

ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.		
ಉತ್ತ.		ನುಡಿ	ದ್	ಎನು	ನುಡಿದೆನು	[I said]
ಮಧ್ಯ.		ನುಡಿ	ದ್	ಇ	ನುಡಿದಿ	[thou saidst]
ಪ್ರಥ.	ಪು.	ನುಡಿ	ದ್	ಅನು	ನುಡಿದನು	[he said]
	ಸ್ತ್ರೀ.	ನುಡಿ	ದ್	ಅಳು	ನುಡಿದಳು	
	ನ.	ನುಡಿ	ಯ್	ಇತು	ನುಡಿಯಿತು	

ಬಹುವಚನ.

ಉತ್ತ.		ನುಡಿ	ದ್	ಎವು	ನುಡಿದೆವು	[we said]
ಮಧ್ಯ.		ನುಡಿ	ದ್	ಇರಿ	ನುಡಿದಿರಿ	[ye or you]
ಪ್ರಥ.	ಪು. ಸ್ತ್ರೀ.	ನುಡಿ	ದ್	ಅರು	ನುಡಿದರು	
	ನ.	ನುಡಿ	ದ್	ಅವು	ನುಡಿದವು	

[future] ಭವಿಷ್ಯತ್ಕಾಲ.

ಏಕವಚನ.

ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.		
ಉತ್ತ.		ನುಡಿ	ಯ್, ಉವ್	ಎನು	ನುಡಿಯುವೆನು	
ಮಧ್ಯ.		ನುಡಿ	ಯ್, ಉವ್	ಇ	ನುಡಿಯುವಿ	
ಪ್ರಥ.	ಪು.	ನುಡಿ	ಯ್, ಉವ್	ಅನು	ನುಡಿಯುವನು	[he will say]
	ಸ್ತ್ರೀ.	ನುಡಿ	ಯ್, ಉವ್	ಅಳು	ನುಡಿಯುವಳು	
	ನ.	ನುಡಿ	ಯ್, ಉವ್	ಅದು	ನುಡಿಯುವದು	

ಬಹುವಚನ.

ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.	
ಉತ್ತ.		ನುಡಿ	ಯ್, ಉವ್	ಎವು	ನುಡಿಯುವೆವು
ಮಧ್ಯ.		ನುಡಿ	ಯ್, ಉವ್	ಇರಿ	ನುಡಿಯುವಿರಿ
ಪ್ರಥ.	ಪು. ಸ್ತ್ರೀ.	ನುಡಿ	ಯ್, ಉವ್	ಅರು	ನುಡಿಯುವರು
	ನ.	ನುಡಿ	ಯ್, ಉವ್	ಅವು	ನುಡಿಯುವವು

ಸಂಶಯ ರೂಪ.

ಏಕವಚನ.

ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.	
ಉತ್ತ.		ನುಡಿ	ದ್	ಏನು	ನುಡಿದೇನು
ಮಧ್ಯ.		ನುಡಿ	ದ್	ಈಯೆ	ನುಡಿದೀಯೆ
ಪ್ರಥ.	ಪು.	ನುಡಿ	ದ್	ಆನು	ನುಡಿದಾನು
	ಸ್ತ್ರೀ.	ನುಡಿ	ದ್	ಆಳು	ನುಡಿದಾಳು
	ನ.	ನುಡಿ	ದ್	ಈತು	ನುಡಿದೀತು

ಬಹುವಚನ.

ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯ.	
ಉತ್ತ.		ನುಡಿ	ದ್	ಏವು	ನುಡಿದೇವು
ಮಧ್ಯ.		ನುಡಿ	ದ್	ಈರಿ	ನುಡಿದೀರಿ
ಪ್ರಥ.	ಪು. ಸ್ತ್ರೀ.	ನುಡಿ	ದ್	ಆರು	ನುಡಿದಾರು
	ನ.	ನುಡಿ	ದ್	ಆವು	ನುಡಿದಾವು

ನಿಷೇಧ.

ಏಕವಚನ.

ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯಯ.	
ಉತ್ತ.		ನುಡಿ	ಯ್	ಎನು	ನುಡಿಯೆನು
ಮಧ್ಯ.		ನುಡಿ	ಯ್	ಎ	ನುಡಿಯೆ
ಪ್ರಥ.	ಪು.	ನುಡಿ	ಯ್	ಅನು	ನುಡಿಯನು
	ಸ್ತ್ರೀ.	ನುಡಿ	ಯ್	ಅಳು	ನುಡಿಯಳು
	ನ.	ನುಡಿ	ಯ್	ಅದು	ನುಡಿಯದು

ಬಹುವಚನ.

ಉತ್ತ.		ನುಡಿ	ಯ್	ಎವು	ನುಡಿಯೆವು
ಮಧ್ಯ.		ನುಡಿ	ಯ್	ಅರಿ	ನುಡಿಯರಿ
ಪ್ರಥ.	ಪು. ಸ್ತ್ರೀ.	ನುಡಿ	ಯ್	ಅರು	ನುಡಿಯರು
	ನ.	ನುಡಿ	ಯ್	ಅವು	ನುಡಿಯವು

ವಿಧಿ.

ಏಕವಚನ.

ಉತ್ತ.		ನುಡಿ	ಯ್	ಅಲಿ	ನುಡಿಯಲಿ
ಮಧ್ಯ.		ನುಡಿ			ನುಡಿ
ಪ್ರಥ.	ಪು. ಸ್ತ್ರೀ. ನ.	ನುಡಿ	ಯ್	ಅಲಿ	ನುಡಿಯಲಿ

ಬಹುವಚನ.

ಪುರುಷ.	ಲಿಂಗ.	ಧಾತು.	ಆಗಮ.	ಪ್ರತ್ಯಯ.	
ಉತ್ತ.		ನುಡಿ	ಯ್, ಉವ್	ಅ	ನುಡಿಯುವ
			ಯ್	ಓಣ	ನುಡಿಯೋಣ
ಮಧ್ಯ.		ನುಡಿ	ಯ್	ಇರಿ	ನುಡಿಯಿರಿ
ಪ್ರಥ.	ಪು. ಸ್ತ್ರೀ. ನ.	ನುಡಿ	ಯ್	ಅಲಿ	ನುಡಿಯಲಿ

ಅವ್ಯಯರೂಪಗಳು.

ಭಾವರೂಪ.

ಧಾತು.	ಆಗಮ.	ಪ್ರತ್ಯಯ.	
ನುಡಿ	ಯ್	ಅ	ನುಡಿಯ
ನುಡಿ	ಯ್	ಅಲು	ನುಡಿಯಲು
ನುಡಿ	ಯ್	ಅಲಿಕ್ಕೆ	ನುಡಿಯಲಿಕ್ಕೆ

ನ್ಯೂನಗಳು.

ಕ್ರಿಯಾನ್ಯೂನ.

ಕಾಲ.	ಧಾತು.	ಆಗಮ.	ಪ್ರತ್ಯಯ.	
ವರ್ತ.	ನುಡಿ	ಯ್	ಉತ್ತಾ	ನುಡಿಯುತ್ತಾ
ಭೂತ.	ನುಡಿ	ದ್	ಉ	ನುಡಿದು
ನಿಷೇ.	ನುಡಿ	ಯ್	ಅದೆ	ನುಡಿಯದೆ

VERBS.

ಶಬ್ದನ್ಯೂನ. *Participles*

ಕಾಲ.	ಧಾತು.	ಆಗಮ.	ಪ್ರತ್ಯಯ.	
ವರ್ತ. } ಭವಿ. }	ನುಡಿ	ಯ್	ಉವ	ನುಡಿಯುವ *that will say*
ಭೂತ.	ನುಡಿ	ದ್	ಅ	ನುಡಿದ *that said*
ನಿಷೇ.	ನುಡಿ	ಯ್	ಅದ	ನುಡಿಯದ *that does not say*

that does not, did not, or will not say)

೧೦೮. ಈ ಉದಾಹರಣೆಗಳಿಂದ ತೋರುವದೇನಂದರೆ, ವರ್ತಮಾನದಲ್ಲಿ ಉತ್ತ್ ಆಗಮ ಬರುತ್ತದೆ.

೧೦೯. ಭೂತದಲ್ಲಿ ದ್ ಆಗಮ ಬರುತ್ತದೆ, ಬರುವಾಗ್ಯೆ ಧಾತು ಉಕಾರಾಂತವಾದರೆ, ಅದರ ಉಕಾರಕ್ಕೆ ಇಕಾರಾದೇಶ ಸಹಿತವಾಗಿ ಬರುತ್ತದೆ. ಇತು ಪ್ರತ್ಯಯಕ್ಕೆ ದ್ಕಾರಾಗಮ ಬರುವದಿಲ್ಲ.

೧೧೦. ಭವಿಷ್ಯತ್ತಲ್ಲಿ ಉವ್ ಆಗಮ ಬರುತ್ತದೆ.

೧೧೧. ಸಂಶಯ ರೂಪದಲ್ಲಿ ಧಾತು ಉಕಾರಾಂತವಾದರೆ, ಆನು, ಆಳು, ಆರು, ಆವು, ಏನು, ಏವು, ಪ್ರತ್ಯಯಗಳನ್ನು ಶೇರಿಸುವದರಲ್ಲಿ ಉಕಾರಕ್ಕೆ ಇಕಾರಾದೇಶ ಬಂದು, ಯಕಾರಾಗಮ ಬರುತ್ತದೆ. ಈ, ಈರಿ, ಪ್ರತ್ಯಯಗಳು ಶೇರುವಾಗ ಉ ಲೋಪವಾಗುತ್ತದೆ. ಧಾತು ಇಕಾರಾಂತವಾದರೆ, ದ್ ಕಾರಾಗಮ ಬರುತ್ತದೆ.

೧೧೨. ಕಡಿಮೆ ಪ್ರತ್ಯಯಗಳೆಲ್ಲಾ ಸಂಧಿಯ ನ್ಯಾಯಗಳ ಪ್ರಕಾರವಾಗಿ ಶೇರುತ್ತವೆ.

೧೧೩. ಭಾವರೂಪದ ಮೇಲೆಯೂ ಶಬ್ದನ್ಯೂನಗಳಮೇಲೆಯೂ

ಬೇರೆ ಅವ್ಯಯ ಪ್ರತ್ಯಯಗಳು ಶೇರುತ್ತವೆ. ಹೀಗೆ ಬಂದೇ ಕ್ರಿಯಾಪದದಲ್ಲಿ ಎರಡು ಅವ್ಯಯಗಳು ಕೂಡುವದರಿಂದ ಅದಕ್ಕೆ ಸಂಯುಕ್ತರೂಪವೆಂದು ಹೇಳಲ್ಪಡುವದು.

ಸಂಯುಕ್ತರೂಪಗಳು.

ಭಾವರೂಪ.	ಮಾಡಲು.	ಆಗಿ	ಮಾಡಲಾಗಿ
ಶಬ್ದನ್ಯೂನ.	ಮಾಡುವ	ಆಗ	ಮಾಡುವಾಗ
		ಆಗ್ಯೆ	ಮಾಡುವಾಗ್ಯೆ
		ಅಲ್ಲಿ	ಮಾಡುವಲ್ಲಿ
ಶಬ್ದನ್ಯೂನ.	ಮಾಡಿದ	ಆಗ	ಮಾಡಿದಾಗ
		ಆಗ್ಯೂ	ಮಾಡಿದಾಗ್ಯೂ
		ರೆ	ಮಾಡಿದರೆ
		ರೂ	ಮಾಡಿದರೂ

೧೧೪. ಇವುಗಳಲ್ಲಿ ಮಾಡಲಾಗಿ, ಮಾಡುವಾಗ, ಮಾಡುವಾಗ್ಯೆ, ಮಾಡುವಲ್ಲಿ, ಮಾಡಿದಾಗ, ಎಂಬವುಗಳು ಸಮಕಾಲ ಅರ್ಥವನ್ನು ಹೇಳುತ್ತವೆ; ಮಾಡಿದರೆ, ಮಾಡಿದರೂ, ಮಾಡಿದಾಗ್ಯೂ, ಎಂಬವುಗಳು ಸಂದೇಹಾರ್ಥವನ್ನು ಹೇಳುತ್ತವೆ.

IRREGULAR VERBS.

ವಿಕಾರವಾದ ಧಾತುಗಳನ್ನು ಕುರಿತು.

೧೧೫. ಮೇಲೆ ಹೇಳಿರುವ ಕ್ರಮವನ್ನು ಬಿಟ್ಟು ರೂಪ ಹೊಂದುವ ಧಾತುಗಳು ವಿಕಾರವಾದ ಧಾತುಗಳು, ಅವು ಯಾವವಂದರೆ,

ಅಡು	ಎನ್ನು	ಕೊನರು	ನೂಲು	ಬೆಸೆ	ಸಾ
ಅನ್ನು	ಎಸೆ	ಕೊಲ್ಲು	ನೆಡು	ಬೇ	ಸಾಲು
ಅರಿ	ಏಳು	ಕೊಳ್ಳು	ನೇಲು	ಬೇಸರು	ಸೀನು
ಅಲೆ	ಒಡೆ	ಕೊಳೆ	ನೋ	ಮಡು	ಸುಡು
ಅವಿ	ಕದಿ	ಗೆಲ್ಲು	ನೋನು	ಮಡಲು	ಸೋಲು
ಅಳು	ಕಳಿ	ಚಳಿ	ಪಡು	ಮರೆ	ಹದಿ
ಆಗು	ಕವಲು	ಚಿಗುರು	ಬರು	ಮಲೆ	ಹಸಿ
ಆನು	ಕಳೆ	ಜೋಲು	ಬಳಿ	ಮಸೆ	ಹಿಸಿ
ಆಸರು	ಕಾ	ತರು	ಬಸಿ	ಮೂ	ಹುಸಿ
ಇಡು	ಕಾಣು	ತಳಿರು	ಬಾ	ಮಿಗು	ಹೆರು
ಇರು	ಕಿಸಿ	ತಿನ್ನು	ಬಿಗು	ಮಿದಿ	ಹೊಗು
ಈ	ಕೀ	ತೆರು	ಬಿಡು	ಮಿಳಿರು	ಹೊದಿ
ಈನು	ಕೀಳು	ತೇ	ಬಿರಿ	ಮಿಸಾ	ಹೊರಡು
ಉಗು	ಕುರಿ	ತೊಡು	ಬಿಸಾಡು	ಮುನಿ	ಹೊರು
ಉಡು	ಕುಸಿ	ತೋ	ಬಿಸುಡು	ಮೆಲ್ಲು	ಹೊಸೆ
ಉಣ್ಣು	ಕೂರು	ನಗು	ಬೀ	ಮೇ	ಹೋಗು
ಉಳ್ಳು	ಕೆಡು	ನಿಲ್ಲು	ಬೀಳು	ಮೊಳೆ	ಹೋಲು
ಎಚ್ಚರು	ಕೊಡು	ನುಸಿ	ಬೆವರು	ಸಲ್ಲು	

IRREGULAR VERBS.

೧೧೬. ಹೆಚ್ಚಾದ ಸ್ಥಳಗಳಲ್ಲಿ ವಿಕಾರಾಗುವ ಧಾತುಗಳು ಯಾವವಂದರೆ, ಇರು, ಬರು, ತರು, ಆಗು, ಹೋಗು, ಅನ್ನು, ಎನ್ನು, ತಿನ್ನು, ಕೊಳ್ಳು, ಬಾ, ಬೀ, ಕೀ, ಮೀ, ಬೇ, ಎಂಬವುಗಳೇ.

ಉದಾಹರಣೆ.

೧೧೭. ಇರು ಧಾತು.

ವರ್ತಮಾನ ಕಾಲ.

ಪುರುಷ.	ಲಿಂಗ.	ಏಕವಚನ.	
ಉತ್ತ.		ಇರುತ್ತೇನೆ,	ಇದ್ದೇನೆ
ಮಧ್ಯ.		ಇರುತ್ತೀ	ಇದ್ದೀ
ಪ್ರಥ.	ಪು.	ಇರುತ್ತಾನೆ	ಇದ್ದಾನೆ
	ಸ್ತ್ರೀ.	ಇರುತ್ತಾಳೆ	ಇದ್ದಾಳೆ
	ನ.	ಇರುತ್ತದೆ	ಇದೆ, ಅದೆ
		ಬಹುವಚನ.	
ಉತ್ತ.		ಇರುತ್ತೇವೆ	ಇದ್ದೇವೆ.
ಮಧ್ಯ.		ಇರುತ್ತೀರಿ	ಇದ್ದೀರಿ
ಪ್ರಥ.	ಪು. ಸ್ತ್ರೀ.	ಇರುತ್ತಾರೆ	ಇದ್ದಾರೆ
	ನ.	ಇರುತ್ತವೆ	ಇವೆ. ಅವೆ

ಭೂತಕಾಲ.

ಪುರುಷ.	ಲಿಂಗ.	ಏಕವಚನ.	ಬಹುವಚನ.
ಉತ್ತ.		ಇದ್ದೆನು	ಇದ್ದೆವು
ಮಧ್ಯ.		ಇದ್ದಿ	ಇದ್ದಿರಿ
ಪ್ರಥ.	ಪು.	ಇದ್ದನು	ಇದ್ದರು
	ಸ್ತ್ರೀ.	ಇದ್ದಳು	
	ನ.	ಇತ್ತು	ಇದ್ದವು.

ಸಂಶಯರೂಪ.

ಉತ್ತ.		ಇದ್ದೇನು	ಇದ್ದೇವು
ಮಧ್ಯ.		ಇದ್ದೀಯೆ	ಇದ್ದೀರಿ
ಪ್ರಥ.	ಪು.	ಇದ್ದಾನು	ಇದ್ದಾರು
	ಸ್ತ್ರೀ.	ಇದ್ದಾಳು	
	ನ.	ಇದ್ದೀತು	ಇದ್ದಾವು

ನ್ಯೂನಗಳು.

ಕ್ರಿಯಾನ್ಯೂನ.	ಭೂತ.	ಇದ್ದು.
ಶಬ್ದನ್ಯೂನ.	ಭೂತ.	ಇದ್ದ.

IRREGULAR VERBS.

೧೧೮. ಬರು ಧಾತು.

ಭೂತಕಾಲ.

ಪುರುಷ.	ಲಿಂಗ.	ಏಕವಚನ.	ಬಹುವಚನ.
ಉತ್ತ.		ಬಂದೆನು	ಬಂದೆವು
ಮಧ್ಯ.		ಬಂದಿ	ಬಂದಿರಿ
ಪ್ರಥ.	ಪು.	ಬಂದನು	ಬಂದರು
	ಸ್ತ್ರೀ.	ಬಂದಳು	
	ನ.	ಬಂತು	ಬಂದವು

ಸಂಶಯರೂಪ

ಪುರುಷ.	ಲಿಂಗ.	ಏಕವಚನ.	ಬಹುವಚನ.
ಉತ್ತ.		ಬಂದೇನು	ಬಂದೇವು
ಮಧ್ಯ.		ಬಂದೀಯೆ	ಬಂದೀರಿ
ಪ್ರಥ.	ಪು.	ಬಂದಾನು	ಬಂದಾರು
	ಸ್ತ್ರೀ.	ಬಂದಾಳು	
	ನ.	ಬಂದೀತು	ಬಂದಾವು

ನಿಷೇಧ.

ಪುರುಷ.	ಲಿಂಗ.	ಏಕವಚನ.	ಬಹುವಚನ.
ಉತ್ತ.		ಬಾರೆನು	ಬಾರೆವು
ಮಧ್ಯ.		ಬಾರಿ, ಬಾರೆ	ಬಾರಿರಿ
ಪ್ರಥ.	ಪು.	ಬಾರನು	ಬಾರರು
	ಸ್ತ್ರೀ	ಬಾರಳು	
	ನ.	ಬಾರದು	ಬಾರವು

ವಿಧಿ.

ಪುರುಷ.	ಲಿಂಗ.	ಏಕವಚನ.	ಬಹುವಚನ.
ಉತ್ತ.			ಬರುವ, ಬರೋಣ
ಮಧ್ಯ.		ಬಾ	ಬನ್ನಿ, ಬನ್ನಿರಿ
ಪ್ರಥ.	ಪು. ಸ್ತ್ರೀ. ನ.	ಬರಲಿ	ಬರಲಿ

ನ್ಯೂನಗಳು.

ಕ್ರಿಯಾನ್ಯೂನ.

ಭೂತ. ಬಂದು ನಿಷೇಧ. ಬಾರದೆ

ಶಬ್ದನ್ಯೂನ.

ಭೂತ. ಬಂದ ನಿಷೇಧ. ಬಾರದ

ಹೀಗೆಯೇ ತರು ಧಾತು ರೂಪವಾಗುತ್ತದೆ.

---

೧೧೯. ಆಗು ಧಾತು.

ಭೂತಕಾಲ.

ಪುರುಷ.	ಲಿಂಗ.	ಏಕವಚನ.	ಬಹುವಚನ.
ಉತ್ತ.		ಆದೆನು	ಆದೆವು
ಮಧ್ಯ.		ಆದಿ	ಆದಿರಿ

ಪುರುಷ.	ಲಿಂಗ.	ಏಕವಚನ.	ಬಹುವಚನ.
ಪ್ರಥ.	ಪು.	ಆದನು	ಆದರು
	ಸ್ತ್ರೀ.	ಆದಳು	
	ನ.	ಆಯಿತು	ಆದವು

ಸಂಶಯರೂಪ

ಉತ್ತ.		ಆದೇನು	ಆದೇವು
ಮಧ್ಯ.		ಆದೀಯೆ	ಆದೀರಿ
ಪ್ರಥ.	ಪು.	ಆದಾನು	ಆದಾರು
	ಸ್ತ್ರೀ.	ಆದಾಳು	
	ನ.	ಆದೀತು	ಆದಾವು

ಶಬ್ದನ್ಯೂನ. ಭೂತ. ಆದ.

ಹೀಗೆಯೇ ಹೋಗು ಧಾತು ರೂಪವಾಗುತ್ತದೆ.

---

೧೦. ಅನ್ನು ಧಾತು.

ಭೂತಕಾಲ.

ಉತ್ತ.		ಅಂದೆನು	ಅಂದೆವು
ಮಧ್ಯ.		ಅಂದಿ	ಅಂದಿರಿ
ಪ್ರಥ.	ಪು.	ಅಂದನು	ಅಂದರು
	ಸ್ತ್ರೀ.	ಅಂದಳು	
	ನ.	ಅಂದಿತು	ಅಂದವು

ಭವಿಷ್ಯತ್ಕಾಲ.

ಪುರುಷ.	ಲಿಂಗ	ಏಕವಚನ.	ಬಹುವಚನ.
ಉತ್ತ.		ಅನ್ನುವೆನು / ಅಂಬುವೆನು	ಅನ್ನುವೆವು / ಅಂಬುವೆವು
ಮಧ್ಯ		ಅನ್ನುವಿ / ಅಂಬುವಿ	ಅನ್ನುವಿರಿ / ಅಂಬುವಿರಿ
ಪ್ರಥ.	ಪು.	ಅನ್ನುವನು / ಅಂಬುವನು	ಅನ್ನುವರು / ಅಂಬುವರು
	ಸ್ತ್ರೀ.	ಅನ್ನುವಳು / ಅಂಬುವಳು	
	ನ.	ಅನ್ನುವದು / ಅಂಬುವದು	ಅನ್ನುವವು / ಅಂಬುವವು

ಸಂಶಯರೂಪ.

ಉತ್ತ.		ಅಂದೇನು	ಅಂದೇವು
ಮಧ್ಯ.		ಅಂದೀಯೆ	ಅಂದೀರಿ
ಪ್ರಥ.	ಪು.	ಅಂದಾನು	ಅಂದಾರು
	ಸ್ತ್ರೀ.	ಅಂದಾಳು	
	ನ.	ಅಂದೀತು	ಅಂದಾವು

ನ್ಯೂನಗಳು.

ಕ್ರಿಯೂನ್ಯೂನ. ಭೂತ. ಅಂದು ಅಂತ.

ಶಬ್ದನ್ಯೂನ. ವರ್ತ. ಅನ್ನುವ ಅಂಬುವ, ಅಂಬ.

ಹೀಗೆಯೇ ಎನ್ನು, ತಿನ್ನು, ಧಾತುಗಳು ಆಗುತ್ತವೆ. ತಿನ್ನು ಧಾತುವಿಗೆ ಕ್ರಿ. ನ್ಯೂ. ಭೂತದಲ್ಲಿ ತಿಂದು ಮಾತ್ರವಾಗುತ್ತದೆ.

---

೧೨೧. ಕೊಳ್ಳು ಧಾತು.

ಭೂತಕಾಲ.

ಉತ್ತ.		ಕೊಂಡೆನು	ಕೊಂಡೆವು
ಮಧ್ಯ.		ಕೊಂಡಿ	ಕೊಂಡಿರಿ
ಪ್ರಥ.	ಪು.	ಕೊಂಡನು	ಕೊಂಡರು
	ಸ್ತ್ರೀ.	ಕೊಂಡಳು	
	ನ.	ಕೊಂಡಿತು	ಕೊಂಡವು.

ಸಂಶಯ ರೂಪ.

ಪುರುಷ.	ಲಿಂಗ.	ಏಕವಚನ.	ಬಹುವಚನ.
ಉತ್ತ.		ಕೊಂಡೇನು	ಕೊಂಡೇವು
ಮಧ್ಯ.		ಕೊಂಡೀಯೆ	ಕೊಂಡೀರಿ
ಪ್ರಥ.	ಪು.	ಕೊಂಡಾನು	ಕೊಂಡಾರು
	ಸ್ತ್ರೀಂ.	ಕೊಂಡಾಳು	
	ನ.	ಕೊಂಡೀತು	ಕೊಂಡಾವು

IRREGULAR VERBS.

ವಿಧಿ. ಮಧ್ಯಮ. ಏಕವಚನ. ಕೊಳ್ಳು. ಕೋ.

ಕ್ರಿಯಾನ್ಯೂನ. ಭೂತ. ಕೊಂಡು.

ಶಬ್ದನ್ಯೂನ. ಭೂತ. ಕೊಂಡ.

೧೦೨. ಬಾ ಧಾತು.

ಭೂತ. ಬಾತನು. ಸಂಶ. ಬಾತಾನು.

ಕ್ರಿಯಾನ್ಯೂನ. ಭೂತ. ಬಾತು.

ಶಬ್ದನ್ಯೂನ. ಭೂತ. ಬಾತ.

ಹೀಗೆಯೇ ಬೀ, ಕೀ ಧಾತುಗಳು ಆಗುತ್ತವೆ.

೧೦೩. ಮಿಾ ಧಾತು.

ಭೂತ. ಮಿಂದನು. ಸಂಶ. ಮಿಂದಾನು.

ವಿಧಿ. ಮಧ್ಯಮ. ಏಕವಚನ. ಮಿಾಯಿ.

ಕ್ರಿಯಾನನ್ಯೂ. ಭೂತ. ಮಿಂದು.

ಶಬ್ದನ್ಯೂನ. ಭೂತ. ಮಿಂದ.

ಹೀಗೆಯೇ ಪೇ, ನೋ, ಧಾತುಗಳು ಆಗುತ್ತವೆ.

೧೦೪. ಭೂತ, ಸಂಶಯರೂಪಗಳಲ್ಲಿಯೂ; ಭೂತ, ಕ್ರಿಯಾನ್ಯೂನಗಳಲ್ಲಿಯೂ; ಭೂತ, ಶಬ್ದನ್ಯೂನಗಳಲ್ಲಿಯೂ; ಮಾತ್ರ ವಿಕಾರವಾಗುವ ಧಾತುಗಳು ಅನೇಕ ಉಂಟು.

೧೦೫. ಇವುಗಳಲ್ಲಿ ಕೆಲವುಗಳಿಗೆ ಭೂತ. ನಪು. ಪ್ರಥಮ. ಏಕವಚನ. ಯಾವಾಗ್ಯೂ ಕ್ರಮವಾಗಿ ಬರುತ್ತದೆ.

೧೦೬. ಹೀಗೆ ಆಗುವ ಧಾತುಗಳು ಯಾವವೆಂದರೆ,

IRREGULAR VERBS.

ಧಾತು.	ಭೂತ. ಪುಲ್ಲಿಂಗ.	ಭೂತ. ನಪುಂ. ಏಕ.
ಅಡು	ಅಟ್ಟನು	ಅಟ್ಟಿತು
ಅರಿ	ಅರಿತನು	ಅರಿಯಿತು
ಅಲೆ	ಅಲೆದನು	ಅಲೆಯಿತು
	ಅಲೆತನು	ಅಲೆಯಿತು
ಅವಿ	ಅವಿತನು	ಅವಿಯಿತು
ಅಳು	ಅತ್ತನು	ಅತ್ತಿತು
ಆನು	ಆತನು	ಆತಿತು
ಆಸರು	ಆಸತ್ತನು	ಆಸತ್ತಿತು
ಇಡು	ಇಟ್ಟನು	ಇಟ್ಟಿತು
ಈ	ಇತ್ತನು	ಇತ್ತಿತು
ಈನು		ಈಯಿತು
ಉಗು	ಉಕ್ಕನು	ಉಕ್ಕಿತು
ಉಡು	ಉಟ್ಟನು	ಉಟ್ಟಿತು
ಉಣ್ಣು	ಉಣ್ಡನು	ಉಣ್ಡಿತು
ಉಳು	ಉತ್ತನು	ಉತ್ತಿತು
ಎಚ್ಚರು	ಎಚ್ಚತ್ತನು	ಎಚ್ಚತ್ತಿತು
ಎಸೆ	ಎಸೆದನು	ಎಸೆಯಿತು
	ಎಸೆತನು	ಎಸೆಯಿತು
ಏಳು	ಎದ್ದನು	ಎದ್ದಿತು
ಒದೆ	ಒದ್ದನು	ಒದ್ದಿತು

IRREGULAR VERBS.

ಸಂಶಯರೂಪ.	ಕ್ರಿಯಾನ್ಯೂನ.	ಶಬ್ದನ್ಯೂನ.
ಅಟ್ಟಾನು	ಅಟ್ಟು	ಅಟ್ಟ
ಅರಿತಾನು	ಅರಿತು	ಅರಿತ
ಅಲೆದಾನು	ಅಲೆದು	ಅಲೆದ
ಅಲೆತಾನು	ಅಲೆತು	ಅಲೆತ
ಅವಿತಾನು	ಅವಿತು	ಅವಿತ
ಅತ್ತಾನು	ಅತ್ತು	ಅತ್ತ
ಆತಾನು	ಆತು	ಆತ
ಆಸತ್ತಾನು	ಆಸತ್ತು	ಆಸತ್ತ
ಇಟ್ಟಾನು	ಇಟ್ಟು	ಇಟ್ಟ
ಇತ್ತಾನು	ಇತ್ತು	ಇತ್ತ
ಈದೀತು	ಈದು	ಈದ
ಉಕ್ಕಾನು	ಉಕ್ಕು	ಉಕ್ಕ
ಉಟ್ಟಾನು	ಉಟ್ಟು	ಉಟ್ಟ
ಉಣ್ಡಾನು	ಉಣ್ಡು	ಉಣ್ಡ
ಉತ್ತಾನು	ಉತ್ತು	ಉತ್ತ
ಎಚ್ಚತ್ತಾನು	ಎಚ್ಚತ್ತು	ಎಚ್ಚತ
ಎಸೆದಾನು	ಎಸೆದು	ಎಸೆದ
ಎಸೆತಾನು	ಎಸೆತು	ಎಸೆತ
ಎದ್ದಾನು	ಎದ್ದು	ಎದ್ದ
ಒದ್ದಾನು	ಒದ್ದು	ಒದ್ದ

IRREGULAR VERBS.

ಧಾತು.	ಭೂತ. ಪುಲ್ಲಿಂಗ.	ಭೂತ. ನಪುಂ. ಏಕ.
ಕದಿ	ಕದ್ದನು	ಕದಿಯಿತು
ಕಲಿ	ಕಲಿತನು	ಕಲಿಯಿತು
ಕವಲು	ಕವಲ್ತನು	ಕವಲ್ತಿತು
ಕಳೆ	ಕಳೆತನು	ಕಳೆತಿತು
ಕಾ	ಕಾದನು	ಕಾಯಿತು
ಕಾಣು	ಕಣ್ಡನು	ಕಣ್ಡಿತು
ಕಿಸಿ	ಕಿಸಿದನು	ಕಿಸಿಯಿತು
	ಕಿಸಿತನು	ಕಿಸಿಯಿತು
ಕೀಳು	ಕಿತ್ತನು	ಕಿತ್ತಿತು
ಕುರಿ	ಕುರಿತನು	ಕುರಿಯಿತು
ಕುಸಿ	ಕುಸಿದನು	ಕುಸಿಯಿತು
	ಕುಸಿತನು	ಕುಸಿಯಿತು
ಕೂರು	ಕೂತನು	ಕೂತಿತು
ಕೆಡು	ಕೆಟ್ಟನು	ಕೆಟ್ಟಿತು
ಕೊಡು	ಕೊಟ್ಟನು	ಕೊಟ್ಟಿತು
ಕೊನರು	ಕೊನರ್ತನು	ಕೊನರಿತು
ಕೊಳ್ಳು	ಕೊಂಡನು	ಕೊಂಡಿತು
ಕೊಳೆ	ಕೊಳೆತನು	ಕೊಳೆಯಿತು
ಗೆಲ್ಲು	ಗೆದ್ದನು	ಗೆದ್ದಿತು
ಚಳೆ	ಚಳೆತನು	ಚಳೆತಿತು

IRREGULAR VERBS.

ಸಂಶಯರೂಪ.	ಕ್ರಿಯಾನ್ಯೂನ.	ಶಬ್ದನ್ಯೂನ.
ಕದ್ದಾನು	ಕದ್ದು	ಕದ್ದ
ಕಲಿತಾನು	ಕಲಿತು	ಕಲಿತ
ಕವಲ್ತಾನು	ಕವಲ್ತು	ಕವಲ್ತ
ಕಳೆತಾನು	ಕಳೆತು	ಕಳೆತ
ಕಾದಾನು	ಕಾದು	ಕಾದ
ಕಣ್ಡಾನು	ಕಣ್ಡು	ಕಣ್ಡ
ಕಿಸಿದಾನು	ಕಿಸಿದು	ಕಿಸಿದ
ಕಿಸಿತಾನು	ಕಿಸಿತು	ಕಿಸಿತ
ಕಿತ್ತಾನು	ಕಿತ್ತು	ಕಿತ್ತ
ಕುರಿತಾನು	ಕುರಿತು	ಕುರಿತ
ಕುಸಿದಾನು	ಕುಸಿದು	ಕುಸಿದ
ಕುಸಿತಾನು	ಕುಸಿತು	ಕುಸಿತ
ಕೂತಾನು	ಕೂತು	ಕೂತ
ಕೆಟ್ಟಾನು	ಕೆಟ್ಟು	ಕೆಟ್ಟ
ಕೊಟ್ಟಾನು	ಕೊಟ್ಟು	ಕೊಟ್ಟ
ಕೊನರ್ತಾನು	ಕೊನರ್ತು	ಕೊನರ್ತ
ಕೊಂದಾನು	ಕೊಂದು	ಕೊಂದ
ಕೊಳೆತಾನು	ಕೊಳೆತು	ಕೊಳೆತ
ಗೆದ್ದಾನು	ಗೆದ್ದು	ಗೆದ್ದ
ಚಳೆತಾನು	ಚಳೆತು	ಚಳೆತ

IRREGULAR VERBS.

ಧಾತು.	ಭೂತ. ಪುಲ್ಲಿಂಗ.	ಭೂತ. ನವುಂ. ಏಕ.
ಚೆಗುರು	ಚೆಗುರ್ತನು	ಚೆಗುರಿತು
ಜೋಲು	ಜೋತನು	ಜೋತಿತು
ತಳೆರು	ತಳೆರ್ತನು	ತಳೆರಿತು
ತೆರು	ತೆತ್ತನು	ತೆತ್ತಿತು
ತೇ	ತೇದನು	ತೇಯಿತು
ತೊಡು	ತೊಟ್ಟನು	ತೊಟ್ಟಿತು
ತೋ	ತೋಯ್ದನು	ತೋಯಿತು
ನಗು	ನಕ್ಕನು	ನಕ್ಕಿತು
ನಿಲ್ಲು	ನಿಂತನು	ನಿಂತಿತು
ನುಸಿ	ನುಸಿದನು	ನುಸಿಯಿತು
	ನುಸಿತನು	ನುಸಿಯಿತು
ನೂಲು	ನೂತನು	ನೂತಿತು
ನೆಡು	ನೆಟ್ಟನು	ನೆಟ್ಟಿತು
ನೇಲು	ನೇತನು	ನೇತಿತು
ನೋನು	ನೋತನು	ನೋತಿತು
ಪಡು	ಪಟ್ಟನು	ಪಟ್ಟಿತು
ಬಲಿ	ಬಲಿತನು	ಬಲಿಯಿತು
ಬಸಿ	ಬಸಿದನು	ಬಸಿಯಿತು
	ಬಸಿತನು	ಬಸಿಯಿತು
ಬಿಗು	ಬಿಕ್ಕನು	ಬಿಕ್ಕಿತು

IRREGULAR VERBS.

ಸಂಶಯರೂಪ.	ಕ್ರಿಯಾನ್ಯೂನ.	ಶಬ್ದನ್ಯೂನ.
ಚೆಗುರ್ತಾನು	ಚೆಗುರ್ತು	ಚೆಗುರ್ತ
ಜೋತಾನು	ಜೋತು	ಜೋತ
ತಳಿರ್ತಾನು	ತಳಿರ್ತು	ತಳಿರ್ತ
ತೆತ್ತಾನು	ತೆತ್ತು	ತೆತ್ತ
ತೇದಾನು	ತೇದು	ತೇದ
ತೊಟ್ಟಾನು	ತೊಟ್ಟು	ತೊಟ್ಟ
ತೊಯ್ದಾನು	ತೊಯ್ದು	ತೊಯ್ದ
ನಕ್ಕಾನು	ನಕ್ಕು	ನಕ್ಕ
ನಿಂತಾನು	ನಿಂತು	ನಿಂತ
ನುಸಿದಾನು	ನುಸಿದು	ನುಸಿದ
ನುಸಿತಾನು	ನುಸಿತು	ನುಸಿತ
ನೂತಾನು	ನೂತು	ನೂತ
ನೆಟ್ಟಾನು	ನೆಟ್ಟು	ನೆಟ್ಟ
ನೇತಾನು	ನೇತು	ನೇತ
ನೋತಾನು	ನೋತು	ನೋತ
ಪಟ್ಟಾನು	ಪಟ್ಟು	ಪಟ್ಟ
ಬಲಿತಾನು	ಬಲಿತು	ಬಲಿತ
ಬಸಿದಾನು	ಬಸಿದು	ಬಸಿದ
ಬಸಿತಾನು	ಬಸಿತು	ಬಸಿತ
ಬಿಕ್ಕಾನು	ಬಿಕ್ಕು	ಬಿಕ್ಕ

IRREGULAR VERBS.

ಧಾತು.	ಭೂತ. ಪುಲ್ಲಿಂಗ.	ಭೂತ. ನಪುಂ. ಏಕ.
ಬಿಡು	ಬಿಟ್ಟನು	ಬಿಟ್ಟಿತು
ಬಿರಿ	ಬಿರಿದನು	ಬಿರಿಯಿತು
	ಬಿರಿತನು	ಬಿರಿಯಿತು
ಬಿಸಾಡು	ಬಿಸಾಟಿದನು	ಬಿಸಾಟಿತು
ಬಿಸುಡು	ಬಿಸುಡಿದನು	ಬಿಸುಡಿತು
	ಬಿಸುಟನು	ಬಿಸುಟಿತು
ಬೀಳು	ಬಿದ್ದನು	ಬಿತ್ತು
ಬೆವರು	ಬೆವರ್ತನು	ಬೆವರ್ತಿತು
ಬೆಸೆ	ಬೆಸೆದನು	ಬೆಸೆಯಿತು
	ಬೆಸೆತನು	ಬೆಸೆಯಿತು
ಬೇಸರು	ಬೇಸರ್ತನು	ಬೇಸರ್ತಿತು
ಮಡು	ಮಟ್ಟನು	ಮಟ್ಟಿತು
ಮಡಲು	ಮಡಲ್ತನು	ಮಡಲ್ತಿತು
ಮರೆ	ಮರೆತನು	ಮರೆತಿತು
ಮಲೆ	ಮಲೆತನು	ಮಲೆಯಿತು
ಮಸೆ	ಮಸೆದನು	ಮಸೆಯಿತು
	ಮಸೆತನು	ಮಸೆಯಿತು
ಮಾ	ಮಾದನು	ಮಾಯಿತು
ಮಿಗು	ಮಿಕ್ಕನು	ಮಿಕ್ಕಿತು
ಮಿದಿ	ಮಿತ್ತನು	ಮಿತ್ತಿತು

IRREGULAR VERBS.

ಸಂಶಯರೂಪ.	ಕ್ರಿಯಾನ್ಯೂನ.	ಶಬ್ದನ್ಯೂನ.
ಬಿಟ್ಟಾನು	ಬಿಟ್ಟು	ಬಿಟ್ಟ
ಬಿರಿದಾನು	ಬಿರಿದು	ಬಿರಿದ
ಬಿರಿತಾನು	ಬಿರಿತು	ಬಿರಿತ
ಬಿಸಾಟಾನು	ಬಿಸಾಟು	ಬಿಸಾಟ
ಬಿಸುಡಿಯೊನು	ಬಿಸುಡಿ	ಬಿಸುಡಿದ
ಬಿಸುಟಾನು	ಬಿಸುಟು	ಬಿಸುಟ
ಬಿದ್ದಾನು	ಬಿದ್ದು	ಬಿದ್ದ
ಬೆವರ್ತಾನು	ಬೆವರ್ತು	ಬೆವರ್ತ
ಬೆಸೆದಾನು	ಬೆಸೆದು	ಬೆಸೆದ
ಬೆಸೆತಾನು	ಬೆಸೆತು	ಬೆಸೆತ
ಬೇಸತ್ತಾನು	ಬೇಸತ್ತು	ಬೇಸತ್ತ
ಮಟ್ಟಾನು	ಮಟ್ಟು	ಮಟ್ಟ
ಮಡಲ್ತಾನು	ಮಡಲ್ತು	ಮಡಲ್ತ
ಮರೆತಾನು	ಮರೆತು	ಮರೆತ
ಮಲೆತಾನು	ಮಲೆತು	ಮಲೆತ
ಮಸೆದಾನು	ಮಸೆದು	ಮಸೆದ
ಮಸೆತಾನು	ಮಸೆತು	ಮಸೆತ
ಮಾದಾನು	ಮಾದು	ಮಾದ
ಮಿಕ್ಕಾನು	ಮಿಕ್ಕು	ಮಿಕ್ಕ
ಮಿತ್ತಾನು	ಮಿತ್ತು	ಮಿತ್ತ

IRREGULAR VERBS.

ಧಾತು.	ಭೂತ. ಪುಲ್ಲಿಂಗ.	ಭೂತ. ನಪುಂ. ಏಕ.
ಮಿಳ್ಳಿರು	ಮಿಳ್ಳಿರ್ತ್ತನು	ಮಿಳ್ಳಿರ್ತ್ತಿತು
ಮುನಿ	ಮುನಿದನು	ಮುನಿಯಿತು
	ಮುನಿತನು	ಮುನಿಯಿತು
ಮೆಲ್ಲು	ಮೆದ್ದನು	ಮೆದ್ದಿತು
ಮೇ	ಮೇದನು	ಮೇಯಿತು
ಮೊಳ್ಳೆ	ಮೊಳ್ಳೆತನು	ಮೊಳ್ಳೆಯಿತು
ಸಲ್ಲು	ಸಂದನು	ಸಂದಿತು, ಸಂತು
ಸಾ	ಸತ್ತನು	ಸತ್ತಿತು
ಸಾಲು	ಸಾತನು	ಸಾತಿತು
ಸೀನು	ಸೀತನು	ಸೀತಿತು
ಸುಡು	ಸುಟ್ಟನು	ಸುಟ್ಟಿತು
ಸೋಲು	ಸೋತನು	ಸೋತಿತು
ಹದಿ	ಹದ್ದನು	ಹದ್ದಿತು
ಹಸಿ	ಹಸಿದನು	ಹಸಿದಿತು
	ಹಸಿತನು	ಹಸಿತಿತು
ಹಿಸಿ	ಹಿಸಿದನು	ಹಿಸಿಯಿತು
	ಹಿಸಿತನು	ಹಿಸಿಯಿತು
ಹುಸಿ	ಹುಸಿದನು	ಹುಸಿದಿತು
	ಹುಸಿತನು	ಹುಸಿದಿತು
ಹೆರು	ಹೆತ್ತನು	ಹೆತ್ತಿತು

IRREGULAR VERBS.

ಸಂಶಯರೂಪ.	ಕ್ರಿಯಾನ್ಯೂನ.	ಶಬ್ದನ್ಯೂನ.
ಮಿಳ್ಳಿರ್ತಾನು	ಮಿಳ್ಳಿರ್ತು	ಮಿಳ್ಳಿರ್ತ
ಮುನಿದಾನು	ಮುನಿದು	ಮುನಿದ
ಮುನಿತಾನು	ಮುನಿತು	ಮುನಿತ
ಮೆದ್ದಾನು	ಮೆದ್ದು	ಮೆದ್ದ
ಮೇದಾನು	ಮೇದು	ಮೇದ
ಮೊಳ್ಳೆತಾನು	ಮೊಳ್ಳೆತು	ಮೊಳ್ಳೆತ
ಸಂದಾನು	ಸಂದು	ಸಂದ
ಸತ್ತಾನು	ಸತ್ತು	ಸತ್ತ
ಸಾತಾನು	ಸಾತು	ಸಾತ
ಸೀತಾನು	ಸೀತು	ಸೀತ
ಸುಟ್ಟಾನು	ಸುಟ್ಟು	ಸುಟ್ಟ
ಸೋತಾನು	ಸೋತು	ಸೋತ
ಹದ್ದಾನು	ಹದ್ದು	ಹದ್ದ
ಹಸಿದಾನು	ಹಸಿದು	ಹಸಿದ
ಹಸಿತಾನು	ಹಸಿತು	ಹಸಿತ
ಹಿಸಿದಾನು	ಹಿಸಿದು	ಹಿಸಿದ
ಹಿಸಿತಾನು	ಹಿಸಿತು	ಹಿಸಿತ
ಹುಸಿದಾನು	ಹುಸಿದು	ಹುಸಿದ
ಹುಸಿತಾನು	ಹುಸಿತು	ಹುಸಿತ
ಹೆತ್ತಾನು	ಹೆತ್ತು	ಹೆತ್ತ

IRREGULAR VERBS.

ಧಾತು.	ಭೂತ. ಪುಲ್ಲಿಂಗ.	ಭೂತ. ನಪುಂ. ಏಕ.
ಹೊಗು	ಹೊಕ್ಕನು	ಹೊಕ್ಕಿತು
ಹೊದಿ	ಹೊದ್ದನು	ಹೊದ್ದಿತು
ಹೊರಡು	ಹೊರಟನು	ಹೊರಟಿತು
ಹೊರು	ಹೊತ್ತನು	ಹೊತ್ತಿತು
ಹೊಸೆ	ಹೊಸೆದನು	ಹೊಸೆಯಿತು
	ಹೊಸೆತನು	ಹೊಸೆಯಿತು
ಹೋಲು	ಹೋತನು	ಹೋತಿತು

---

೧೭೭ ವಿಧಿ ಮಧ್ಯಮ ಪುರುಷ ಏಕವಚನದಲ್ಲಿ ಮಾತ್ರ ವಿಕಾರವಾಗುವ ಧಾತುಗಳು ಯಾವವಂದರೆ, ಕಾ, ತೇ, ಮಾ, ಮೇ, ಎಂಬವುಗಳೆ. ಉದಾ. ಕಾಯಿ.

೧೭೮. ಇನ್ನು ಅನೇಕ ಧಾತುಗಳಿಗೆ ಕೆಲವು ಕಡೆಯಲ್ಲಿ ಲೋಪ ಬರುವದುಂಟು. ಹ್ಯಾಗಂದರೆ ವರ್ತಮಾನ. ಪ್ರಥಮ. ಏಕವಚನದಲ್ಲಿ ತ್ತದೆ, ಎಂಬುವದಕ್ಕೆ ತ್ತೆ, ಆದೇಶವಾಗುವದುಂಟು. ಉದಾ. ಬರುತ್ತದೆ, ಬರುತ್ತೆ, ಹೋಗುತ್ತದೆ, ಹೋಗುತ್ತೆ.

೧೭೯. ಅನು, ಎನು, ಎಂಬುವ ಪ್ರತ್ಯಯಗಳಲ್ಲಿ, ನು ಎಂ

ಸಂಶಯರೂಪ.	ಕ್ರಿಯಾನ್ಯೂನ.	ಶಬ್ದನ್ಯೂನ.
ಹೊಕ್ಕಾನು	ಹೊಕ್ಕು	ಹೊಕ್ಕ
ಹೊದ್ದಾನು	ಹೊದ್ದು	ಹೊದ್ದ
ಹೊರಟಾನು	ಹೊರಟು	ಹೊರಟ
ಹೊತ್ತಾನು	ಹೊತ್ತು	ಹೊತ್ತ
ಹೊಸೆದಾನು	ಹೊಸೆದು	ಹೊಸೆದ
ಹೊಸೆತಾನು	ಹೊಸೆತು	ಹೊಸೆತ
ಹೋತಾನು	ಹೋತು	ಹೋತ

ಬುವ ಕಡೇ ಅಕ್ಷರ ಲೋಪವಾಗುವದುಂಟು. ಉದಾ. ನುಡಿದನು, ನುಡಿದ, ನುಡಿದೆನು, ನುಡಿದೆ.

೧೩೦. ದುಪ್ರತ್ಯಯ ನ್ಯೂನದ ಮೇಲೆ ಕೊಳ್ಳು ಧಾತು ಶೇರಿದರೆ, ದುಪ್ರತ್ಯಯ ಲೋಪವಾಗಿ ಧಾತುವಿನ ಕಡೆ ಸ್ವರಕ್ಕೆ ಆದೇಶವಾಗುವದುಂಟು. ಉದಾ. ಬರೆದು, ಬರಕೋ, ಹಿಡಿದು, ಹಿಡುಕೋ.

೧೩೧. ತೆಗೆದು ಎಂಬುವ ನ್ಯೂನಕ್ಕೆ ತ ಆದೇಶವಾಗುವದುಂಟು. ಉದಾ. ತಕೋ.

DEFECTIVE VERBS.

ಉಪಪದ ಕ್ರಿಯಾಪದಗಳು.

೧೩೨. ಕೆಲವು ರೂಪಗಳು ಇಲ್ಲದವುಗಳು ಉಪಪದ ಕ್ರಿಯಾ ಪದಗಳು. ಅವುಗಳಲ್ಲಿ ಕೆಲವುಗಳಿಗೆ ಕಾಲ ಭೇದವಿಲ್ಲ; ಕೆಲವುಗಳಿಗೆ ಕಾಲ ಪುರುಷ ಭೇದವಿಲ್ಲ; ಕೆಲವುಗಳಿಗೆ ಕಾಲ ಲಿಂಗ ಪುರುಷ ಭೇದವಿಲ್ಲ.

ಉದಾಹರಣೆ

ಪುರುಷ.	ಲಿಂಗ.	ಏಕವಚನ.	ಬಹುವಚನ.
ಉತ್ತ.		ಆಪೆನು	ಆಪೆವು
ಮಧ್ಯ.		ಆಪಿ, ಆಪೆ	ಆಪಿರಿ
ಪ್ರಥ.	ಪು.	ಆಪನು	ಆಪರು
	ಸ್ತ್ರೀ.	ಆಪಳು	
	ನ.	ಆಪದು	ಆಪವು

ಶಬ್ದನ್ಯೂನ. ಆಪ.

ಪುರುಷ.	ಲಿಂಗ.	ಏಕವಚನ.	ಬಹುವಚನ.
ಉತ್ತ.		ಆರೆನು	ಆರೆವು
ಮಧ್ಯ.		ಆರಿ, ಆರೆ	ಆರಿರಿ
ಪ್ರಥ.	ಪು.	ಆರನು	ಆರರು
	ಸ್ತ್ರೀ.	ಆರಳು	
	ನ	ಆರದು	ಆರವು.

ಕ್ರಿ. ನ್ಯೂ. ಭೂತ. ಆರದೆ. ಶ. ನ್ಯೂ. ಭೂ. ಆರದ.

DEFECTIVE VERBS.

ಪುರುಷ. ಲಿಂಗ.		ಏಕವಚನ.	ಬಹುವಚನ.
ಉತ್ತ.		ಬಲ್ಲೆನು	ಬಲ್ಲೆವು
ಮಧ್ಯ.		ಬಲ್ಲಿ, ಬಲ್ಲೆ	ಬಲ್ಲಿರಿ
ಪ್ರಥ.	ಪು.	ಬಲ್ಲನು	ಬಲ್ಲರು
	ಸ್ತ್ರೀ.	ಬಲ್ಲಳು	
	ನ.	ಬಲ್ಲದು	ಬಲ್ಲವು

ಶಬ್ದನ್ಯೂನ. ಬಲ್ಲ.

ಪುರುಷ. ಲಿಂಗ.		ಏಕವಚನ.	ಬಹುವಚನ.
ಉತ್ತ.		ಬಲ್ಲೆನು	ಬಲ್ಲೆವು
ಮಧ್ಯ.		ಬಲ್ಲಿ, ಬಲ್ಲೆ	ಬಲ್ಲಿರಿ
ಪ್ರಥ.	ಪು.	ಬಲ್ಲನು	ಬಲ್ಲರು
	ಸ್ತ್ರೀ.	ಬಲ್ಲಳು	
	ನ.	ಬಲ್ಲದು	ಬಲ್ಲವು

ಕ್ರಿ. ನ್ಯೂ. ನಿಷೇ. ಬಲ್ಲದೆ.

೧೩೩. ಇವು ಬೇರೆ ಧಾತುವಿನ ಸಂಗಡ ಶೇರಿದರೆ, ಅದರ ಭಾವ ರೂಪ ಬರಬೇಕು. ಉದಾ. ಮಾಡಲಾರನು, ಮಾಡಬಲ್ಲನು.

೧೩೪. ಬೇಕು, ಬಹುದು, ಇವುಗಳಿಗೆ ಕಾಲ ಪುರುಷಲಿಂಗ ವಚನಗಳ ಭೇದವಿಲ್ಲ, ಇವು ಬೇರೆ ಧಾತುವಿನ ಭಾವರೂಪಕ್ಕೆ ಶೇರುವದುಂಟು. ಉದಾ. ಬರ ಬೇಕು, ಹೋಗ ಬಹುದು.

೧೩೫. ಬೇಡ ಧಾತುವಿಗೆ ವಚನ ಭೇದಮಾತ್ರ ಉಂಟು. ಉದಾ. ನೀನು ಮಾಡಬೇಡ, ನೀವು ಮಾಡಬೇಡಿ, ಮಾಡಬೇಡಿರಿ.

DEFECTIVE VERBS.

೧೩೬. ಬೇಕು, ಬೇಡ, ಮತ್ತೊಂದು ಧಾತುವಿಲ್ಲದೆ ಬೇರೆ ಶಬ್ದಗಳಿಗೆ ಶೇರುವದುಂಟು. ಉದಾ. ಅದು ನನಗೆ ಬೇಡ; ಜ್ಞಾನವೇ ಬೇಕು.

೧೩೭. ಉಂಟು, ಇಲ್ಲ, ಅಹುದು, ಹೌದು ಅಲ್ಲ, ಇವುಗಳಿಗೂ ಕಾಲ ಪುರುಷಲಿಂಗ ವಚನಗಳ ಭೇದವಿಲ್ಲ. ಉದಾ. ಅವನು ಇಲ್ಲ. ಅವರು ಇಲ್ಲ, ನೀನು ಅಲ್ಲ, ನಾನು ಅಲ್ಲ.

೧೩೮. ಇಲ್ಲ ಎಂಬುವದು ಬೇರೆ ಧಾತುವಿನ ಭಾವರೂಪಕ್ಕೆ ಶೇರಿದರೆ ಭೂತಕಾಲದ ನಿಷೇದ ಅರ್ಥವನ್ನು ಹೇಳುತ್ತದೆ, ಉದಾ. ಅವನು ಬರಲಿಲ್ಲ.

೧೩೯. ಅಂತೆ ಎಂಬುವದು ಬೇರೊಂದು ಕ್ರಿಯಾಪದದಮೇಲೆ ಶೇರಿ ಯಾರೊಬ್ಬರು ಅನ್ನುತ್ತಾರೆ ಎಂಬುವ ಅರ್ಥವನ್ನು ಹೇಳುತ್ತದೆ. ಉದಾ. ಬಂದನಂತೆ; ಹೋದನಂತೆ.

REFLEXIVE VERBS.

ಸ್ವಾರ್ಥ ಕ್ರಿಯಾಪದಗಳು

೧೪೦. ತನಗೆ ತಾನೇ, ತನ್ನಿಂದ ತಾನೇ, ಯಾವದೊಂದು ಕ್ರಿಯೆಯನ್ನು ಮಾಡುವನೆಂಬ ಅರ್ಥಗಳನ್ನು ಹೇಳುವ ಕ್ರಿಯಾಪದಗಳು ಸ್ವಾರ್ಥಕ್ರಿಯಾಪದಗಳು.

೧೪೧. ಭೂತ ಕ್ರಿಯಾನ್ಯೂನಕ್ಕೆ ಕೊಳ್ಳು ಧಾತು ಶೇರುವದರಿಂದ ಆಗುತ್ತವೆ. ಉದಾ. ಬರೆದು ಕೊಳ್ಳುತ್ತಾನೆ. ಹಾಡಿಕೊಂಡು ಹೋಗುತ್ತಾನೆ.

PASSIVE VERBS.

ಕರ್ಮ ಕ್ರಿಯಾಪದಗಳು.

೧೪೨. ಒಬ್ಬನಿಂದ ಯಾವದೊಂದು ಕೆಲಸವಾಗುವದೆಂಬ ಅರ್ಥವನ್ನು ಹೇಳುವದು ಕರ್ಮ ಕ್ರಿಯಾಪದವು.

೧೪೩. ಅದು ಪಡು ಧಾತು ಬೇರೆ ಧಾತುವಿನ ಭಾವರೂಪಕ್ಕೆ ಶೇರುವದರಿಂದ ಆಗುತ್ತದೆ. ಉದಾ. ಬರೆಯಲ್ಪಡುತ್ತದೆ; ಕರೆಯಲ್ಪಡುತ್ತಾನೆ.

CAUSAL VERBS.

ಪ್ರೇರಣ ಕ್ರಿಯಾಪದಗಳು.

೧೪೪. ಒಬ್ಬನು ಮತ್ತೊಬ್ಬನಿಂದ ಕ್ರಿಯೆ ನಡಿಸುವನೆಂಬುವ ಅರ್ಥವನ್ನು ಹೇಳುವದು ಪ್ರೇರಣ ಕ್ರಿಯಾಪದವು.

೧೪೫. ಅದು ಇಸು ಪ್ರತ್ಯಯ ಬಂದು ಶುದ್ಧ ಧಾತುವಿನ ಮೇಲೆ ಶೇರುವದರಿಂದ ಆಗುತ್ತದೆ. ಉದಾ. ಬರಿಸು; ಕರಿಸು.

೧೪೬. ಇವುಗಳಿಗೆ ಎಲ್ಲಾ ಕಡೆಯಲ್ಲೂ ಬೇರೆ ಉಕಾರಾಂತ ಧಾತುಗಳ ಹಾಗೆ ರೂಪವಾಗುತ್ತದೆ.

೧೪೭. ಶಬ್ದಗಳ ಮೇಲೆ ಇಸು ಪ್ರತ್ಯಯ ಬಂದರೆ ಪ್ರೇರಣಾರ್ಥ ಆಗುವದಿಲ್ಲ. ಉದಾ. ಸಂತೋಷಿಸು; ದುಃಖಿಸು.

೧೪೮. ಏಳು ಧಾತು ಪ್ರೇರಣಾರ್ಥವಾದರೆ ಎಬ್ಬಿಸು ಆಗುತ್ತದೆ. ಆದರೆ ಏಳಿಸು ಎಂದು ಹೇಳುವದುಂಟು.

INDECLINABLE WORDS AND PARTICLES.

Adverbs, Conjunctions, Postpositions, and Interjections.

ಅವ್ಯಯಗಳನ್ನು ಕುರಿತು.

೧೪೯. ಅವ್ಯಯವಂದರೆ, ಎಲ್ಲಾಕಡೆಯಲ್ಲೂ ಒಂದೆ ರೀತಿಯಾಗಿ ಬರುವ ಶಬ್ದವು. ಉದಾ. ಸಂಗಡ, ಸಂಗಾತ, ಒಡನೆ. ಕೂಡ, ಓಸ್ಕರ, ಬಗ್ಯೆ, ನಿಮಿತ್ತ, ಇಂತ, ಅಂತ, ತನಕ, ವರಿಗೆ, ಮಟ್ಟಿಗೆ, ಪರ್ಯಂತರ, ಸುತ್ತ, ಸುತ್ತಲು, ಸುತ್ತು, ತರುವಾಯ, ಹೊರ್ತು. ತಿರಿಗಿ, ಹಾಗೆ, ಹ್ಯಾಗೆ. ಆಗ, ಆಗಲು, ಆಗ್ಯೆ, ಈಗ, ಈಗಲು, ಈಗ್ಯೆ, ಯಾವಾಗ, ಯಾವಾಗಲು, ಯಾವಾಗ್ಯೆ, ನಿನ್ನೆ, ಮೊನ್ನೆ, ನಾಳೆ, ನಾಳೆದ್ದು ಬೆಳಿಗ್ಯೆ, ಹೊತಾರೆ, ಅಂತೆ, ಓಪಾದೆಯಲಿ, ಸುಮ್ಮನೆ, ಸುಮ್ಮಗೆ, ನೆಟ್ಟನೆ, ನೆಟ್ಟಗೆ, ಮತ್ತು, ಮತ್ತೆ, ಸಹ, ಇನ್ನು, ಅಯ್ಯೋ, ಅಃ, ಚೀಃ, ಇಸ್, ಓ, ಎಲೇ.

೧೫೦. ಅರ್ಥದಪ್ರಕಾರ ಇವುಗಳನ್ನು ವಿಭಾಗಿಸಿದರೆ, ಒಂದೊಂದು ತರಕ್ಕೆ ಒಂದೊಂದು ಹೆಸರು ಕೊಡ ಬಹುದು. ಏನಂದರೆ, ವಿಭಕ್ತ್ಯಾವ್ಯಯ, ಗುಣವಿಶೇಷಣ, ಕ್ರಿಯಾವಿಶೇಷಣ, ಸಂಬಂಧಕಾವ್ಯಯ, ಸಂಬುದ್ಧ್ಯಾವ್ಯಯ, ಅತಿಶಯಾವ್ಯಯ.

೧೫೧. ವಿಭಕ್ತ್ಯಾವ್ಯಯ ನಾಮವಾಚಕದ ಮೇಲೆಯೂ ಸರ್ವನಾಮದ ಮೇಲೆಯೂ ಬರುವದು. ಉದಾ. ಅವನ ಸಂಗಡ, ಮನೆಯ ಮೇಲೆ.

೧೫೨. ಗುಣವಿಶೇಷಣ ಗುಣವಾಚಕದ ಸಂಗಡ ಬಂದು, ಅದನ್ನು ಕುರಿತು ಯಾವದೊಂದು ವಿಶೇಷ ಹೇಳುವದು. ಉದಾ. ಬಹು ದೊಡ್ಡದು.

INDECLINABLE WORDS.

೧೫೩. ಕ್ರಿಯಾವಿಶೇಷಣ ಕ್ರಿಯಾಪದದ ಸಂಗಡ ಬಂದು, ಅರ್ಥನ್ನು ಕುರಿತು ಯಾವದೊಂದು ವಿಶೇಷ ಹೇಳುವದು. ಉದಾ. ಬೇಗ ಬರುತ್ತಾನೆ, ನೆಟ್ಟಗೆ ಹೋಗುತ್ತಾನೆ.

೧೫೪. ಅವ್ಯಯಗಳಲ್ಲದೆ ಆಗಿ ಎಂಬ ಕ್ರಿಯಾನ್ಯೂನವು ನಾಮವಾಚಕಕ್ಕಾದರೂ ಗುಣವಾಚಕಕ್ಕಾದರೂ ಶೇರುವದರಿಂದ ಕ್ರಿಯಾವಿಶೇಷಣವಾಗುವದು. ಉದಾ. ಸಂತೋಷವಾಗಿ ಕೊಟ್ಟನು, ಚನ್ನಾಗಿ ಬರೆಯುತ್ತಾನೆ.

೧೫೫. ಸಂಬಂಧಕಾವ್ಯಯ ಶಬ್ದಗಳನ್ನಾದರೂ ವಾಕ್ಯಗಳನ್ನಾದರೂ ಕೂಡಿಸುತ್ತದೆ. ಉದಾ. ಇವನೂ ಅವನೂ ಹೋದರು; ಮತ್ತು ಇನ್ನು ಅನೇಕ ಜನರು ಹೋದರು. ಇಲ್ಲಿ ಇವನು ಅವನು ಶಬ್ದಗಳನ್ನು ಕೂಡಿಸುವದಕ್ಕೆ ಊ ಎಂಬುವದು ಬಂತು; ಎರಡು ವಾಕ್ಯಗಳನ್ನು ಕೂಡಿಸುವದಕ್ಕೆ ಮತ್ತು ಎಂಬುವದು ಬಂತು.

೧೫೬. ಸಂಬುದ್ಧ್ಯಾವ್ಯಯ ಒಬ್ಬರನ್ನು ಕರೆಯುವದರಲ್ಲಿ ಬರುವದು. ಉದಾ. ಎಲೋಹುಡುಗ.

೧೫೭. ಅತಿಶಯಾವ್ಯಯ ಸಂತೋಷ, ಆಶ್ಚರ್ಯ ಮೊದಲಾದವಗಳನ್ನು ಹೇಳುವದು. ಉದಾ. ಅಯ್ಯೋ, ಆಃ.

೧೫೮. ಇನ್ನು ಕೆಲವು ಪ್ರಶ್ನೆ, ಸಂದೇಹ, ದೃಢ ಅರ್ಥಗಳನ್ನು ಹೇಳುವ ಪ್ರತ್ಯಯಗಳು ಅವ್ಯಯಗಳಲ್ಲಿ ಶೇರುತ್ತವೆ. ಯಾವ ವಂದರೆ, ಏ, ಓ, ಆ, ಉದಾ, ಅದೇ ಕೆಲಸ, ಕೆಲಸವಾಯಿತೋ? ಅದು ಏನೋ? ನಾನರಿಯೆ.

೧೫೯. ಅವ್ಯಯಗಳು ನಾಮವಾಚಕಗಳಿಂದಲೂ ಸರ್ವ ನಾ

ಮಗಳಿಂದಲೂ ಹುಟ್ಟಿರುವವು. ಮತ್ತು ಅವುಗಳಲ್ಲಿ ಕೆಲವು ಅನೇಕ ಸಾರಿ ಅವ್ಯಯಗಳಾಗಿ ಹೇಳಲ್ಪಟ್ಟಾಗ್ಯೂ, ಒಂದೊಂದು ಸ್ಥಳದಲ್ಲಿ ವಿಭಕ್ತಿಗಳನ್ನು ಹೊಂದುತ್ತವೆ.

ಉದಾಹರಣೆ.

ಅಂದು	ನಿನ್ನೆ.
ತೃ. ಅಂದಿನಿಂದ	ತೃ. ನಿನ್ನೆಯಿಂದ
ಚ. ಅಂದಿಗೆ	ಚ. ನಿನ್ನೆಗೆ
ಷ. ಅಂದಿನ	ಷ. ನಿನ್ನಿನ, ನಿನ್ನೆಯ.
ಹೀಗೆ ಇಂದು ಎಂದು ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ.	ಹೀಗೆ ಮೊನ್ನೆ ನಾಳೆ ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ.
ಅತ್ತಲು, ಅತ್ತ	ನಾಳಿದ್ದು.
ತೃ. ಅತ್ತಲಿಂದ	ತೃ. ನಾಳಿದ್ದರಿಂದ
ಚ. ಅತ್ತಲಿಗೆ	ಚ. ನಾಳಿದ್ದಕ್ಕೆ
ಷ. ಅತ್ತಲ	ಷ. ನಾಳಿದ್ದರ
ಹೀಗೆ ಇತ್ತಲು ಎತ್ತಲು ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ.	ಹೊರಗೆ.
ಆಗಲು, ಆಗ	ತೃ. ಹೊರಗಿನಿಂದ
ತೃ. ಆಗಲಿಂದ, ಆಗಿನಿಂದ	ಷ. ಹೊರಗಿನ
ಷ. ಆಗಿನ	ಹೀಗೆ, ಕೆಳಗೆ, ಒಳಗೆ, ಮೇಲೆ, ಹಿಂದೆ, ಮುಂದೆ, ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ.
ಹೀಗೆ ಈಗಲು ಯಾವಾಗಲು ಎಂಬವುಗಳಿಗೆ ವಿಭಕ್ತಿಗಳು ಬರುತ್ತವೆ.	

೧೬೦. ಮತ್ತು ಮೇಲೆ, ಹಿಂದೆ, ಮುಂದೆ, ಎಂಬವುಗಳಿಗೆ ಚತುರ್ಥಿ ಸಹ ಬರುತ್ತದೆ. ಹ್ಯಾಗಂದರೆ, ಮೇಲಕ್ಕೆ, ಹಿಂದಕ್ಕೆ, ಮುಂದಕ್ಕೆ.

DERIVATIVE NOUNS.

ತದ್ಧಿತ ಪ್ರತ್ಯಯಗಳನ್ನು ಕುರಿತು.

೧೬೧. ತದ್ಧಿತಪ್ರತ್ಯಯ ನಾಮವಾಚಕದ ಮೇಲೆ ಸೇರಿ, ಅದಕ್ಕೆ ವಿಶೇಷಾರ್ಥವನ್ನು ಹೇಳುವದು.

೧೬೨. ಅವುಗಳಲ್ಲಿ ಮುಖ್ಯವಾದವುಗಳು ಯಾವವಂದರೆ, ವಂತ, ಆಳಿ, ಗಾರ, ಕಾರ, ಆರ, ಗುಳಿ, ಇಗ, ಇಕ, ವಡಿಗ.

೧೬೩. ಇವುಗಳೆಲ್ಲಾ ನಾಮವಾಚಕಗಳ ಮೇಲೆ ಸೇರುವಾಗ, ಸಂಧಿ ನ್ಯಾಯಗಳಪ್ರಕಾರ ಪ್ರಕೃತಿಗೆ ಸೇರಬೇಕು. ಉದಾ. ಧನವಂತ, ಕುದುರೆಗಾರ, ಮಾತಾಳಿ, ಕುಂಬಾರ, ಸಾಲಗುಳಿ, ಗಾಣಿಗ, ಧನಿಕ, ಹೂವಡಿಗ.

೧೬೪. ಇವುಗಳಲ್ಲಿ ಕೆಲವುಗಳಿಗೆ ಸ್ತ್ರೀಲಿಂಗವನ್ನು ತೋರಿಸುವದಕ್ಕೆ ಳು, ಎ, ತಿ, ಇತಿ, ಪ್ರತ್ಯಯಗಳು ಸೇರುತ್ತವೆ. ಉದಾ. ಧನವಂತಳು, ರೂಪವಂತೆ, ಕುಂಬಾರ್ತಿ, ಕುಂಬಾರಿತಿ, ಹೂವಡಿಗಿತಿ.

೧೬೫. ನಪುಂಸಕ ಪ್ರತ್ಯಯಗಳು ಯಾವವಂದರೆ, ತನ, ಇಕೆ, ಪು. ಉದಾ. ಬಡತನ, ದೊಡ್ಡಸ್ತಿಕೆ, ಬಿಳಿಪು.

VERBAL NOUNS.

ಕ್ರಿಯಾವಾಚಕಗಳನ್ನು ಕುರಿತು.

೧೬೬. ಕ್ರಿಯಾವಾಚಕ ಕೃತ್ಪ್ರತ್ಯಯದಿಂದ ಹುಟ್ಟುವ ಶಬ್ದವು. ಅದು ಎಲ್ಲಾದರಲ್ಲಿ ನಾಮವಾಚಕದ ಹಾಗೆಯೇ ಇರುವದು. ಅದರಹಾಗೆ ವಿಭಕ್ತಿಗಳನ್ನು ಹೊಂದುವದು. ಉದಾ. ಕಟ್ಟು, ಕಟ್ಟುವದು.

೧೬೭. ಅವುಗಳಿಗೆ ಕರ್ತೃ ಕರ್ಮ ಭಾವ ಅರ್ಥಗಳುಂಟು.

೧೬೮. ಕರ್ತೃ ಅರ್ಥವುಳ್ಳದ್ದು ಧಾತು ಹೇಳುವಕ್ರಿಯೆಯನ್ನು ಮಾಡುವವನೆಂಬ ಅರ್ಥವನ್ನು ಹೇಳುವದು. ಉದಾ. ಕುಟ್ಟು. ಕುಟಿಗನು.

೧೬೯. ಕರ್ಮ ಅರ್ಥವುಳ್ಳದ್ದು, ಅದರ ಕರ್ಮವನ್ನು ಹೇಳುವದು. ಉದಾ. ಬರೆ. ಬರಹ.

೧೭೦. ಭಾವಾರ್ಥವುಳ್ಳದ್ದು ಬರೀ ಕ್ರಿಯೆಯನ್ನು ಹೇಳುವದು. ಉದಾ. ಹಾಡು, ಹಾಡುವಿಕೆ.

೧೭೧. ಅವ್ಯಯಗಳಿಂದ ಆಗುವ ಭಾವರೂಪಗಳಿಗೂ ಕೃತ್ಪ್ರತ್ಯಯಗಳಿಂದ ಆಗುವ ಭಾವರೂಪಗಳಿಗೂ ಭೇದ ಹೇಳಬೇಕಾದರೆ ಅದಕ್ಕೆ ಅವ್ಯಯಭಾವರೂಪವೆಂದೂ, ಇದಕ್ಕೆ ಕೃತಾಖ್ಯರೂಪವೆಂದೂ ಹೇಳಬಹುದು.

೧೭೨. ಕರ್ತೃ ಅರ್ಥವಾಗಿ ಕುಳಿ, ಇಗ, ಉಕ, ಅ, ಪುರಿಕೆ ಪ್ರತ್ಯಯಗಳು ಬರುತ್ತವೆ. ಉದಾ. ಆಡು, ಆಡುಕುಳಿ; ಕುಟ್ಟು ಕುಟಿಗ; ಮುರಿ, ಮುರುಕ; ಕೊಣಕು, ಕೊಣಕ; ಅಂಜು, ಅಂಜುಪುರಿಕೆ.

VERBAL NOUNS.

೧೭೩. ಹೀಗೆ ಇವು ಧಾತುಗಳ ಮೇಲೆ ಸಂಧಿಯ ನ್ಯಾಯಗಳ ಪ್ರಕಾರ ಶೇರುತ್ತವೆ. ಮತ್ತು ಬಂದುವೇಳೆ ಧಾತುವಿಗೆ ವ್ಯಂಜನ ಲೋಪವಾಗುವದು. ಉದಾ. ಕುಟ್ಟು, ಕುಟಿಗ.

೧೭೪. ಸೋಲು, ಸಾಲು, ಧಾತುಗಳಾದರೆ, ಗುಳ್ಳೆ ಪ್ರತ್ಯಯ ಕ್ರಿಯೊನ್ಯೂನದ ಮೇಲೆ ಬರುವದು. ಸೋತುಗುಳ್ಳೆ, ಸಾತುಗುಳ್ಳೆ.

೧೭೫. ಕರ್ಮ ಭಾವ ಅರ್ಥಗಳಾಗಿ, ಇಕೆ, ಇಗೆ, ವು ಮೊದಲಾದವುಗಳು ಬರುತ್ತವೆ. ಉದಾ. ತೋರು, ತೋರಿಕೆ; ನೆಡು, ನೆಡಿಗೆ; ಸಾ, ಸಾವು.

೧೭೬. ಕೆಲವು ಧಾತುಗಳು ಬಹಳ ವಿಕಾರವಾಗಿ ಕ್ರಿಯೊವಾಚಕಗಳಾಗುತ್ತವೆ. ಉದಾ. ಉಣ್ಣು, ಊಟ; ಆಡು, ಆಟ; ಕೋಲು, ಕೊಲೆ.

೧೭೭. ಕೆಲವು ಧಾತುಗಳು ಪ್ರತ್ಯಯಗಳನ್ನು ಹೊಂದದೆ ಕ್ರಿಯೊವಾಚಕದ ಅರ್ಥ ಕೊಡುತ್ತದೆ. ಉದಾ. ಬದುಕು, ಬದುಕು; ದಾಟು, ದಾಟು.

೧೭೮. ಭಾವಾರ್ಥವಾಗಿ ಎಲ್ಲಾ ಧಾತುಗಳಿಗೆ ಓಣ, ಉವಿಕೆ ಪ್ರತ್ಯಯಗಳು ಆಗುತ್ತವೆ. ಮತ್ತು ಅದೇ ಅರ್ಥವಾಗಿ ವರ್ತಮಾನ ಶಬ್ದನ್ಯೂನಕ್ಕೆ ಅದು ಶಬ್ದ ಬರುತ್ತದೆ. ಉದಾ. ಕೊಡೋಣ, ಕೊಡುವಿಕೆ, ಕೊಡುವದು

COMPOUND NOUNS.

ಸಮಾಸಪದಗಳನ್ನು ಕುರಿತು.

೧೭೯. ಸಮಾಸಪದವಂದರೆ ಎರಡು ಶಬ್ದಗಳು ಬಂದು ಪದವಾಗಿ ಬಂದೇ ಅರ್ಥವನ್ನು ಹೇಳುವದು. ಉದಾ. ಕೈಕೆಲಸ.

COMPOUND NOUNS.

೧೮೦. ಮೊದಲಲ್ಲಿ ಬರುವ ಪದಕ್ಕೆ ಪೂರ್ವಪದವೆಂದೂ ಅದರ ಮೇಲೆ ಬರುವ ಪದಕ್ಕೆ ಪರ ಪದವೆಂದೂ ಹೆಸರು.

೧೮೧. ತದ್ಭವ ದೇಶ್ಯ ಅನ್ಯದೇಶ್ಯ ಶಬ್ದಗಳಿಗೆ ಸಮಾಸ ವಾಗುತ್ತದೆ. ಉದಾ. ಸೂಜಿ ಮೊನೆ, ಗೋಧಿ ಹಿಟ್ಟು, ಇಟಿಕೆ ಗೋಡೆ. ಹಕ್ಕಿ ಗೂಡು, ಕುದುರೆ ಲಾಯ.

೧೮೨. ಎರಡು ತತ್ಸಮ ಶಬ್ದಗಳು ಸಮಾಸವಾಗ ಬಹುದು. ಉದಾ. ಆತ್ಮರೂಪ, ದೇವದೂತ.

೧೮೩. ಒಂದು ತತ್ಸಮವೂ ಒಂದು ದೇಶ್ಯವೂ ಬಹಳಸಾರಿ ಸಮಾಸವಾಗುವದಿಲ್ಲ. ಉದಾ. ಮನೇಕೃತ್ಯ. ಇದಕ್ಕೆ ಮನೇ ಕೆಲಸವೆಂದಾದರೂ, ಗೃಹಕೃತ್ಯವೆಂದಾದರೂ, ಹೇಳ ಬಹುದು. ಮನೇ ಕೆಲಸ ಅಂದರೆ ಎರಡೂ ದೇಶ್ಯವಾಯಿತು. ಗೃಹಕೃತ್ಯ ಅಂದರೆ ಎರಡೂ ತತ್ಸಮವಾಯಿತು.

೧೮೪. ಪೂರ್ವಪದ ಇ, ಎಕಾರಾಂತವಾದರೆ, ಅದಕ್ಕೆ ದೀರ್ಘವಾಗುವದುಂಟು. ಉದಾ. ಬೆಳ್ಳೀಬಳೆಯು, ಬಾಳೇಹಣ್ಣು.

೧೮೫. ಅನೇಕ ನಾಮವಾಚಕಗಳು ಬರುವಾಗ್ಯೆ ಅವುಗಳ ಕಡೆಯಲ್ಲಿ ಏಕವಚನ ಪ್ರತ್ಯಯವಾಗಲಿ, ಬಹುವಚನ ಪ್ರತ್ಯಯವಾಗಲಿ ಬಂದರೆ ಅದಕ್ಕೆ ದ್ವಂದ್ವಸಮಾಸವೆಂಬ ಹೆಸರು. ಉದಾ. ಮನೆ ಮನೆಗೆ, ತಂದೆ ತಾಯಿಗಳು, ಅಣ್ಣತಮ್ಮಂದಿರು.

SYNTAX.

ಪ್ರಯೋಗವನ್ನು ಕುರಿತು.

೧೮೬. ಇದರಲ್ಲಿ ಮುಂಚೆ ಹೇಳಿದ ಶಬ್ದಗಳನ್ನು ಪ್ರಯೋಗಿಸುವ ವಿಧವು ಹೇಳಲ್ಪಡುತ್ತದೆ.

NOUNS.

Cases of Nouns.

ವಿಭಕ್ತಿಗಳನ್ನು ಕುರಿತು.

ಪ್ರಥಮ.

೧೮೭. ಕರ್ತೃ ತೋರುವದಕ್ಕೂ, ಪಡು ಅಂತವಾದ ಕ್ರಿಯಾಪದಗಳ ಮುಂಚೆ ಬರುವ ಕರ್ಮ ತೋರುವದಕ್ಕೂ, ಪ್ರಥಮೆ ಬರುತ್ತದೆ. ಉದಾ. ಹುಡುಗನು ಓದುತ್ತಾನೆ; ಹುಡುಗಿ ಬರುತ್ತಾಳೆ; ಅವನಿಂದ ಈ ಪುಸ್ತಕವು ಕೊಡಲ್ಪಟ್ಟಿತು.

೧೮೮. ಕೆಲವು ಸ್ಥಳಗಳಲ್ಲಿ ಇದಕ್ಕೆ ಪ್ರತಿಯಾಗಿ ಪ್ರಕೃತಿ ಬರುತ್ತದೆ. ಉದಾ. ಒಬ್ಬ ಹುಡುಗ ಬಂದನು; ಮನೆ ಕಟ್ಟಲ್ಪಟ್ಟಿತು.

೧೮೯. ಕಾಲವನ್ನಾಗಲಿ ಮಾರ್ಗವನ್ನಾಗಲಿ ಹೇಳುವಾಗ, ಪ್ರಥಮೆಯಾದರೂ ಪ್ರಕೃತಿಯಾದರೂ ಬರುತ್ತದೆ. ಉದಾ. ಅನೇಕ ವರುಷಗಳು ಓದುತ್ತಾ ಇದ್ದನು; ನಾಲುಕ್ಕ ದಿವಸ ಕಷ್ಟ ಪಟ್ಟನು; ಐದು ದಿವಸ ಪ್ರಯಾಣ ಹೋಗಿ ತಿರಿಗಿ ಬಂದನು.

ಸಂಬೋಧನೆ.

೧೯೦. ಸಮೀಪದಲ್ಲಿರುವ ಯಾರನ್ನಾದರೂ ಕರೆಯುವಾಗಲೂ, ಅವರ ಸಂಗಡ ಮಾತನಾಡುವಾಗಲೂ, ಸಂಬೋಧನೆ ಬರುತ್ತದೆ. ಉದಾ. ಅಣ್ಣಾ ಬಾ; ಹುಡುಗನೇ, ಬುದ್ಧಿಯನ್ನು ಕೇಳು.

ದ್ವಿತೀಯೆ.

೧೯೧. ಎಲ್ಲಾ ಕರ್ಮ ಧಾತುಗಳ ಮುಂದೆ ಬರುವ ಕರ್ಮವನ್ನು ಹೇಳುವದಕ್ಕೆ ದ್ವಿತೀಯೆ ಬರುತ್ತದೆ. ಉದಾ. ಅವನು ಪಾಠವನ್ನು ಓದುತ್ತಾನೆ; ಕೆಲಸವನ್ನು ಮಾಡಿದನು.

೧೯೨. ಕೆಲವು ಕ್ರಿಯಾಪದಗಳಿಗೆ ಅಪರೂಪವಾಗಿ ಎರಡು ಕರ್ಮ ಬರುವದು. ಉದಾ. ಅವನು ಉಪಾಧ್ಯಾಯನನ್ನು ಪುಸ್ತಕವ ಬೇಡಿದನು; ಇವನು ವರ್ತಕನನ್ನು ಹಣವಕೇಳಿದನು.

೧೯೩. ದ್ವಿತೀಯೆಗೆ ಪ್ರತಿಯಾಗಿ ಪ್ರಕೃತಿ ಬರುವದುಂಟು. ಉದಾ. ಬೀಜ ಹಾಕಿದನು; ಪಾಪ ಮಾಡಿದನು.

ತೃತೀಯೆ.

೧೯೪. ಒಂದು ಕಾರ್ಯಕ್ಕೆ ಕಾರಣವನ್ನು ಹೇಳುವಾಗಲೂ, ಸ್ಥಾನವನ್ನು ಬಿಡುವ ಅರ್ಥವನ್ನು ಹೇಳುವಾಗಲೂ, ತೃತೀಯೆ ಬರುತ್ತದೆ. ಉದಾ. ಪಾಪದಿಂದ ಮರಣ ಉಂಟಾಯಿತು; ಅವನಿಂದ ವಿಚಾರಣೆ ಆಯಿತು; ಬುದ್ಧಿಯಿಂದ ಪ್ರಯೋಜನ ಉಂಟಾಗುತ್ತದೆ; ಮನೆಯಿಂದ ಹೊರಟನು; ಮರದಿಂದ ಹಣ್ಣು ಬಿತ್ತು; ಭಾವಿಯಿಂದ ಮಣ್ಣು ತೆಗೆದನು.

ಚತುರ್ಥಿ.

೧೯೪. ಕೊಡುವದೂ ತಿಳಿಸುವದೂ ಸಮೀಪಿಸುವದೂ ಎಂಬ ಅರ್ಥವುಳ್ಳ ಧಾತುಗಳು ಬರುವಾಗಲೂ, ಬಂದು ಕ್ರಿಯೆಯ ಪ್ರಯೋಜನವನ್ನೂ ಯಾವದೊಂದರ ಭಾವವನ್ನೂ ಇಬ್ಬರಿಗೆ ಆಗಿರುವ ಸಮ್ಮಂಧವನ್ನೂ ಕಾಲದ ನಿಷ್ಕರ್ಷೆಯನ್ನೂ ಎರಡು ಸ್ಥಲಗಳಿಗೆ ಆಗಿರುವ ದೂರವನ್ನೂ ಹೇಳುವಾಗಲೂ, ಚತುರ್ಥಿ ಬರುತ್ತದೆ. ಉದಾ. ತಂದೆ ಮಗನಿಗೆ ಪುಸ್ತಕವನ್ನು ಕೊಟ್ಟನು; ಅವನಿಗೆ ಅನೇಕ ಕಾರ್ಯಗಳನ್ನು ಕಲಿಸಿದನು; ಮನೆಗೆ ಹೋಗುತ್ತೇನೆ; ಹಣ್ಣಿಗೆ ಹೋದನು; ಆನೆಗೆ ಸಿಂಹವು ವೈರಿ; ಅವನು ನನಗೆ ಭಾವಮೈದನ; ರಾತ್ರಿಗೆ ಬರ ಬೇಕು; ಮೈಸೂರಿಗೂ ಶ್ರೀರಂಗಪಟ್ಣಕ್ಕೂ ಮೂರು ಹರುದಾರಿ. ಚತುರ್ಥಿ ಇನ್ನೂ ಯಾವ ಸ್ಥಳಗಳಲ್ಲಿ ಬರ ತಕ್ಕದ್ದೋ, ಪ್ರಯೋಗದಿಂದ ತಿಳಿದು ಕೊಳ್ಳ ಬೇಕು.

ಪಂಚಮಿ.

೧೯೫. ತೃತೀಯೆ ಯಾವ ಸ್ಥಳಗಳಲ್ಲಿ ಬರುತ್ತದೋ ಅದೇ ಸ್ಥಳಗಳಲ್ಲಿ ಪಂಚಮಿ ಬರಬಹುದು. ಉದಾ. ಮರದದೆಸೆಯಿಂದ ಹಣ್ಣು ಬಿತ್ತು; ಊರಿನದೆಸೆಯಿಂದ ಬಂದನು; ಪಾಪದದೆಸೆಯಿಂದ ಮರಣ ಉಂಟಾಯಿತು.

ಷಷ್ಠಿ.

೧೯೬. ಸ್ವತಂತ್ರವನ್ನು ಹೇಳುವಾಗಲೂ ಒಂದರಲ್ಲೊಂದು ಬಂದಕ್ಕೊಂದು ಉಂಟಾಗಿರುವ ಅರ್ಥವನ್ನು ಹೇಳುವಾಗಲೂ ಷಷ್ಟಿ

ಬರುತ್ತದೆ. ಉದಾ. ತಂದೆಯ ಮನೆ, ಮರದ ಕೊಂಬು, ಮನುಷ್ಯನ ಗುಣ, ಕುದುರೆಯ ನಡಿಗೆ.

ಸಪ್ತಮಿ.

೧೯೮. ಯಾವದೊಂದು ಇರುವ ಸ್ಥಳವನ್ನಾದರೂ, ಬೀಳುವ ಸ್ಥಳವನ್ನಾದರೂ, ಗುಂಪಿನಿಂದ ಬಂದನ್ನು ತೆಗೆದು ಅದನ್ನು ಹೇಳುವಾಗಲೂ, ಶ್ರೇಷ್ಠತ್ವವನ್ನೂ, ಕೆಲವು ಸ್ಥಳಗಳಲ್ಲಿ ಕಾರಣವನ್ನು ಹೇಳುವಾಗಲೂ, ಸಪ್ತಮಿ ಬರುತ್ತದೆ. ಉದಾ. ಮನೆಯಲ್ಲಿ ಇದ್ದಾನೆ. ಭಾವಿಯಲ್ಲಿ ಮಣ್ಣು ಬಿತ್ತು. ಹುಡುಗರಲ್ಲಿ ಇವನು ಬುದ್ಧಿವಂತನು. ಮರದಲ್ಲಿ ಪೆಟ್ಟಿಗೆ ಮಾಡಿದನು. ಅವನು ವಿದ್ಯೆಯಲ್ಲಿ ಶ್ರೇಷ್ಠನು.

೧೯೯. ಕೆಲವು ಸ್ಥಳದಲ್ಲಿ ಸಪ್ತಮಿಗೆ ಇಂದ ಪ್ರತ್ಯಯ ಸೇರಿಸಲ್ಪಡುತ್ತದೆ. ಉದಾ. ಅವನು ಮನೆಯಲ್ಲಿಂದ ಬಂದನು, ಪೆಟ್ಟಿಗೆಯಲ್ಲಿಂದ ಹಣವನ್ನು ತೆಗೆದು ಕೊಟ್ಟನು.

Number and Gender of Nouns.

ಏಕವಚನ ಬಹುವಚನಗಳನ್ನೂ ಲಿಂಗವನ್ನೂ ಕುರಿತು.

೨೦೦. ಸಮೂಹಾರ್ಥವುಳ್ಳ ನಾಮವಾಚಕಗಳು ಕೆಲವು ಉಂಟು. ಅವು ಏಕವಚನದಲ್ಲಿ ಬಂದರೂ ಬಹುವಚನ ಅರ್ಥ ತೋರುತ್ತದೆ. ಉದಾ. ದನಗಳು ಬಂದವು ಎಂಬುವದಕ್ಕೆ ದನ ಬಂತೆಂದೂ, ಧಾನ್ಯಗಳು ಹೆಚ್ಚಿದವು ಎಂಬುವದಕ್ಕೆ ಧಾನ್ಯ ಹೆಚ್ಚಿತೆಂದೂ ಹೇಳಬಹುದು.

೨೦೧. ಲೆಖ್ಖದ ಶಬ್ದಗಳ ಮೇಲೆ ಬರುವ ಶಬ್ದಗಳು ಏಕವಚನದಲ್ಲಾದರೂ ಬಹುವಚನದಲ್ಲಾದರೂ ಬರ ಬಹುದು. ಉದಾ. ನಾಲ್ಕು ದಿಕ್ಕು, ನಾಲ್ಕು ದಿಕ್ಕುಗಳು. ಐದು ವರುಷ, ಐದು ವರುಷಗಳು.

೨೦೨. ಮರ್ಯಾದೆ ತೋರುವಾಗ, ಏಕವಚನಕ್ಕೆ ಪ್ರತಿಯಾಗಿ ಬಹುವಚನ ಬರುತ್ತದೆ. ಉದಾ. ಇವರು ಬಹಳ ವಿದ್ವಾಂಸರು.

೨೦೩. ಎರಡು ಶಬ್ದಗಳು ಒಂದಕ್ಕೊಂದು ಸಮ್ಮಂಧವಾಗಿ ಕೂಡಿ ಬಂದರೆ, ಲಿಂಗದಲ್ಲಿಯೂ ವಚನದಲ್ಲಿಯೂ ಸಮಾನವಾಗಿರ ಬೇಕು. ಉದಾ. ಅವನು ದೊಡ್ಡವನು. ಅವನು ಬಡಿಗೆಯವನು. ಅವಳು ಶ್ರೇಷ್ಠಳು. ಅವಳು ಕುಂಬಾರ್ತಿ. ಅದು ಡೊಂಕು. ಅದು ಕಟ್ಟಿಗೆ.

OF PRONOUNS.

ಸರ್ವನಾಮಗಳನ್ನು ಕುರಿತು.

೨೦೪. ಸ್ವಲ್ಪ ಮರ್ಯಾದೆ ತೋರುವಾಗ, ನೀನು ಎಂಬ ಶಬ್ದಕ್ಕೆ ಪ್ರತಿಯಾಗಿ ನೀವು ಎಂಬ ಶಬ್ದವನ್ನು ಹೇಳ ಬಹುದು ಆದರೆ ದೇವರನ್ನು ಕುರಿತು ಯಾವಾಗಲೂ ಏಕವಚನವನ್ನೇ ಹೇಳತಕ್ಕದ್ದು.

೨೦೫. ತಾನು ಶಬ್ದ ಅದರ ಹಿಂದೆ ಬರುವ ಶಬ್ದಕ್ಕೆ ಸಮ್ಮಂಧವಾಗಿರುವದು. ಅದಕ್ಕೆ ಲಿಂಗ ಭೇದವಿಲ್ಲ. ಉದಾ. ಅವನು ತನ್ನ ಪಾಠವನ್ನು ಕಲಿತು ಕೊಳ್ಳುತ್ತಾನೆ. ಅವಳು ತನ್ನ ದುರ್ಗುಣವನ್ನು ಬಿಟ್ಟು ಒಳ್ಳೆಯವಳಾದಳು ಪಕ್ಷಿ ತನಗೆ ತಾನೇ ಗೂಡು ಕಟ್ಟಿಕೊಳ್ಳುತ್ತದೆ. ಅವರು ತಮ್ಮ ಮನೆಗೆ ಹೋದರು.

೨೦೬. ಬಹಳ ಮರ್ಯಾದೆ ತೋರುವಾಗ, ಇದು ಮಧ್ಯಮ ಪು

ರುಷ ಬಹುವಚನದಲ್ಲಿ ಹೇಳಲ್ಪಡುವದು. ಉದಾ. ತಾವು ನನ್ನಮೇಲೆ ಕಟಾಕ್ಷವಿಟ್ಟು ರಕ್ಷಿಸಬೇಕು. ತಮ್ಮನ್ನು ಆಶ್ರೈಸಿ ಕೊಂಡು ಇದ್ದೇನೆ.

೧೦೭. ಅದೇ ಪ್ರಕಾರ ಏಕವಚನಕ್ಕೆ ಅವರು ಶಬ್ದವೂ ಒಬ್ಬರು ಶಬ್ದವೂ ಬರಬಹುದು. ಉದಾ. ಇವರು ನಮ್ಮ ತಂದೆಯವರು. ನೀವು ಒಬ್ಬರೇ ಬಂದಿದ್ದೀರೋ.

೧೦೮. ಸ್ವಲ್ಪ ಮರ್ಯಾದೆ ತೋರುವಾಗ, ಅವನು, ಇವನು, ಅವಳು ಇವಳು, ಎಂಬ ಶಬ್ದಗಳಿಗೆ ಕ್ರಮವಾಗಿ ಆತ, ಈತ, ಆಕೆ, ಈಕೆ, ಶಬ್ದಗಳು ಬರುತ್ತವೆ. ಉದಾ. ಆತನು ಸತ್ಯವಂತನು. ಈತನು ನನ್ನ ಸ್ನೇಹಿತನು. ಆಕೆ ಒಳ್ಳೆಯವಳು, ಈಕೆ ಮುಂಚಿತಾಗಿ ಬಂದಿದ್ದಳು.

೧೦೯. ಯಾವ ಶಬ್ದದ ಬಹುವಚನದ ರೂಪ ಮರ್ಯಾದೆ ತೋರದೆ ಇದ್ದರೂ, ಏಕವಚನಕ್ಕೆ ಬರುವದು. ಉದಾ. ಅವನ್ಯಾರು? ನೀನು ಯಾರು?

೧೧೦. ಆದರೆ ಏಕವಚನವಾದ ಕ್ರಿಯಾಪದದ ಸಂಗಡ ಬಹುವಚನವಾಗಿ ಸೇರುವದಿಲ್ಲ. ಉದಾ. ಯಾರು ಇದ್ದಾನೆ. ಇದಕ್ಕೆ ಯಾವನು ಇದ್ದಾನೆ, ಇಲ್ಲವೆ ಯಾರು ಇದ್ದಾರೆ, ಎಂದು ಹೇಳತಕ್ಕದ್ದು.

OF VERBS.

ಕ್ರಿಯಾಪದಗಳನ್ನು ಕುರಿತು.

೧೧೧. ಕರ್ತೃಪದವೂ ಕ್ರಿಯಾಪದವೂ ಪುರುಷಲಿಂಗ ವಚನಗಳಲ್ಲಿ ಸಮಾನವಾಗಿರಬೇಕು. ಉದಾ. ನಾನು ಇಲ್ಲಿ ಇರುತ್ತೇನೆ. ಅವನು ಬಂದನು. ಅವಳು ಹೋದಳು. ಪಕ್ಷಿ ಹಾರುತ್ತದೆ. ಸತ್ಯವಂತರು ಸತ್ಕ್ರಿಯೆಗಳನ್ನು ಮಾಡುತ್ತಾರೆ.

೨೧೨. ಏಕವಚನದಲ್ಲಿ ಅನೇಕ ಕರ್ತೃಪದಗಳು ಬಂದೇ ಧಾತುವಿಗೆ ಸಮ್ಬಂಧವಾಗಿ ಬರುವಾಗ ಆ ಧಾತು ಬಹುವಚನದಲ್ಲಿರಬೇಕು. ಉದಾ. ಅರಸನೂ ಅರಸಿಯೂ ಬಂದರು.

೨೧೩. ಇಂಥಾ ವಾಕ್ಯದ ಮೇಲೆ ಸರ್ವನಾಮ ಬಂದರೆ, ಆ ಸರ್ವನಾಮವು ಬಹುವಚನವಾಗಿರಬೇಕು. ಉದಾ. ಆ ಮನುಷ್ಯನೂ ಅವನ ಹೆಂಡತಿಯೂ ಬರುತ್ತಾರೆ; ಅವರು ಬಂದಾಗ ಹೇಳುತ್ತೇನೆ.

೨೧೪. ಅನೇಕ ಸರ್ವನಾಮಗಳು ಕೂಡಿ ಬರುವಾಗ, ನಾನು ಶಬ್ದ ಅವುಗಳಲ್ಲಿ ಶೇರಿದರೆ, ಧಾತೂ ಹಿಂದೆ ಬರುವ ಸರ್ವನಾಮವೂ ಉತ್ತಮಪುರುಷವಾಗಿರಬೇಕು. ಉದಾ. ಅವನೂ ನೀನೂ ನಾನೂ ಬೆಂಗಳೂರಿಗೆ ಹೋದೆವು; ನಾವಲ್ಲಿರುವಾಗ ಸುಖದಲ್ಲಿದ್ದೆವು.

೨೧೫. ಆದರೆ ಅವುಗಳಲ್ಲಿ ನಾನು ಶಬ್ದವಿಲ್ಲದೆ, ನೀನು ಶಬ್ದ ಶೇರಿದರೆ, ಧಾತೂ ಹಿಂದೆ ಬರುವ ಸಮಾಧಾನವೂ ಮಧ್ಯಮಪುರುಷವಾಗಿರಬೇಕು. ಉದಾ. ನೀನೂ ಅವನೂ ಬುದ್ಧಿವಂತರಾಗಿದ್ದೀರಿ; ಆದದರಿಂದ ನಿಮಗೆ ಪ್ರಯೋಜನ ಬರುವದು.

೨೧೬. ಭವಿಷ್ಯತ್ತರ್ಥವಾಗಿ ವರ್ತಮಾನರೂಪ ಬರುತ್ತದೆ. ಉದಾ. ನಾಳೆ ಬರುತ್ತೇನೆ.

೨೧೭. ಅದೇ ಅರ್ಥದಲ್ಲಿ ಅತಿ ತ್ವರೆ ತೋರುವಾಗ ಭೂತರೂಪ ಬರುತ್ತದೆ. ಉದಾ. ಈಗ ಬಂದೆ; ನಡೆ.

೨೧೮. ಹೋದಕಾಲದಲ್ಲಿ ಬಂದು ಕೆಲಸ ನಡೆಯದ್ದಕ್ಕೆ ಕಾರಣವನ್ನು ಹೇಳುವಾಗ ಭವಿಷ್ಯದ್ರೂಪ ಬರುತ್ತದೆ. ಉದಾ. ನಾನು ನಿನ್ನೆ ಬರುವೆ. ಆದರೆ ಮಳೆ ಬಂದದರಿಂದ ಬರಲಿಲ್ಲ.

೨೧೯. ಮೂರು ಕಾಲಗಳ ಅರ್ಥವಾಗಿ ಭವಿಷ್ಯದ್ರೂಪ ಬರುತ್ತದೆ. ಉದಾ. ಪೂರ್ವದಲ್ಲಿ ಮಧುರಾಪುರಿ ಎಂಬ ಪಟ್ಣದಲ್ಲಿ ತ್ರಿವಿಕ್ರಮನೆಂಬ ಅರಸನಿರುವನು. ಈಗ ಮನೆಯಲ್ಲಿ ತಂದೆ ತಾಯಿಗಳಿರುವರು. ನೀವು ಅವನ ಮನೆಗೆ ಹೋದರೆ ನಾಳೆ ಹಣವನ್ನು ಕೊಡುವೆನು.

೨೨೦ ಆದರೆ ವರ್ತಮಾನ ಭವಿಷ್ಯತ್ಕಾಲಗಳಿಗೆ ಹೆಚ್ಚಾಗಿ ಬರುವದು.

೨೨೧. ನಿಷೇಧರೂಪ ಹಾಗೆಯೇ ಮೂರು ಕಾಲಗಳ ಅರ್ಥವಾಗಿ ಬರ ಬಹುದು. ಆದರೆ ಹೆಚ್ಚಾಗಿ ವರ್ತಮಾನ ಭವಿಷ್ಯತ್ಕಾಲಗಳಿಗೆ ಬರುವದು. ಉದಾ. ಹೋದ ವರುಷದಲ್ಲಿ ವ್ಯಾಕರಣವನ್ನು ನಾನರಿಯೆ. ಈಗ ನೀತಿಯನ್ನು ಬಿಡೆನು; ಎಂದಿಗೂ ಬಿಡೆನು.

OF PARTICIPLES AND GERUNDS.

ನ್ಯೂನಗಳನ್ನು ಕುರಿತು.

೨೨೨. ಕ್ರಿಯಾನ್ಯೂನಗಳು ಬೇರೆ ಧಾತುವಿನ ಸಂಗಡ ಒಂದೇ ಕರ್ತೃ ಪದಕ್ಕೆ ಸಂಬಂಧವಾಗಿರಬೇಕು. ಉದಾ. ಅವನು ಹಾಡುತ್ತಾ ಹೋದನು. ಅವಳು ಹೋಗಿ ಬಂದಳು.

೨೨೩. ಆದರೆ ಕಾಲವನ್ನು ಹೇಳುವಾಗ, ಬೇರೆ ಬೇರೆ ಕರ್ತೃ ಪದಗಳು ಬರುತ್ತವೆ. ಉದಾ. ನಾನು ನಿಮ್ಮನ್ನು ನೋಡಿ ಹತ್ತು ವರುಷವಾಯಿತು.

೨೨೪. ಹೇತುವನ್ನು ತೋರುವಾಗ, ಹಾಗೆಯೇ ಬರುತ್ತದೆ. ಉದಾ. ಘಾಳಿಬೀಸಿ ಮರದಿಂದ ಹಣ್ಣು ಬಿತ್ತು.

೧೭೫. ಶಬ್ದನ್ಯೂನಗಳ ಮೇಲೆ ಬರುವ ಶಬ್ದಗಳು ಬೇಕಾದ ವಿಭಕ್ತಿಯಲ್ಲಿ ಬರುತ್ತವೆ. ಉದಾ. ನಾನು ಕೊಟ್ಟ ಪುಸ್ತಕವು ಇದೇ. ನಾನು ಕೊಟ್ಟ ಪುಸ್ತಕವನ್ನು ಅವನು ಓದಿದನು. ನಾನು ಕೊಟ್ಟ ಪುಸ್ತಕದಿಂದ ಅವನಿಗೆ ಬುದ್ಧಿ ಬಂತು.

VERBAL NOUNS.

ಕ್ರಿಯಾವಾಚಕಗಳನ್ನು ಕುರಿತು.

೧೭೬. ಅದು ಪ್ರತ್ಯಯವಾದ ಕ್ರಿಯಾವಾಚಕಗಳ ಸಂಗಡ ಕರ್ತೃಕರ್ಮಗಳನ್ನು ತೋರಿಸುವ ಶಬ್ದಗಳು ಸೇರ ಬಹುದು. ಉದಾ. ನಾನು ಹೋಗುವದು, ನೀನು ಬರೆಯುವದು, ಅವನು ಪುಸ್ತಕವನ್ನು ಓದುವದು.

೧೭೭. ಓಣ ಪ್ರತ್ಯಯವಾದವುಗಳ ಸಂಗಡ ಕರ್ತೃಪದ ಸೇರಬಹುದು. ಉದಾ. ನೀವು ಬರೋಣ ಯಾವಾಗ ಆಯಿತು.

೧೭೮. ಆದರೆ ಇಕೆ ಉವಿಕೆ ಮೊದಲಾದ ಪ್ರತ್ಯಯವುಳ್ಳವುಗಳ ಸಂಗಡ ಬೇರೆ ಶಬ್ದಗಳು ಸೇರಿದರೆ ಷಷ್ಟಿಯಲ್ಲಿ ಮಾತ್ರ ಬರುವದು. ಉದಾ. ಅವರ ತಿಳುವಿಕೆ, ತಂದೆಯ ಬರುವಿಕೆ.

INDECLINABLE WORDS.

ಅವ್ಯಯಗಳನ್ನು ಕುರಿತು.

೧೭೯. ಷಷ್ಟಿಯಮೇಲೆ ಬರುವ ಅವ್ಯಯಗಳಲ್ಲಿ ಮುಖ್ಯವಾದವುಗಳು ಯಾವವಂದರೆ; ಸಂಗಡ, ಸಂಗಾತ, ಒಡನೆ, ಕೂಡ,

ಬಗ್ಯೆ, ನಿಮಿತ್ತ, ತನಕ, ವರಿಗೆ, ಮಟ್ಟಿಗೆ. ಪರ್ಯಂತರ, ಸುತ್ತ, ಸುತ್ತಲು, ತರುವಾಯ, ಬಳಿಯ, ಮೇಲೆ, ಕೆಳಗೆ, ಹಾಗೆ, ಅಂತೆ, ಮೊದಲಾದವುಗಳು. ಉದಾ. ಅವನ ಸಂಗಡ ಹೋದನು. ಈ ಕೆಲಸದ ನಿಮಿತ್ತ ಬಂದಿದ್ದಾನೆ.

೨೩೦. ಚತುರ್ಥಿಗೆ ಬರುವ ಅವ್ಯಯಗಳು ಯಾವವಂದರೆ; ಓಸ್ಕರ, ಇಂತ, ಅಂತ, ಮುಂಚೆ, ಎಂಬವುಗಳು. ಉದಾ. ಇದಕೊಸ್ಕರ ಬಂದೆನು. ಅವನಿಗಿಂತ ನೀನು ಬುದ್ಧಿವಂತನು. ಮುಂಚೆ ಬರಬೇಕಾಗಿತ್ತು.

೨೩೧. ಹೊರ್ತು ಎಲ್ಲಾ ವಿಭಕ್ತಿಗಳಿಗೆ ಬರುತ್ತದೆ. ಉದಾ. ನೀನೇ ಹೊರ್ತು ಬೇರೆ ಆಧಾರವಿಲ್ಲ. ಅವನಹೊರ್ತು ನೀವೆಲ್ಲರು ಬನ್ನಿ.

೨೩೨. ಇನ್ನು ಕೆಲವು ಅವ್ಯಯಗಳು ಶಬ್ದನ್ಯೂನಗಳಿಗೆ ಶೇರುತ್ತವೆ. ತನಕ, ವರಿಗೆ, ಪರ್ಯಂತರ, ಮಟ್ಟಿಗೆ, ಮುಂಚೆ, ಬಳಿಕ, ತರುವಾಯ, ಮೇಲೆ, ಹಾಗೆ, ಮೊದಲಾದವುಗಳು. ಉದಾ. ಓದುವತನಕ, ಬಂದ ತರುವಾಯ, ಬರುವಮಟ್ಟಿಗೆ.

೨೩೩. ಕೆಲವು ವಿಭಕ್ತ್ಯಾವ್ಯಯಗಳು ಕ್ರಿಯಾವಿಶೇಷಣಗಳಾಗಿ ಪ್ರಯೋಗವಾಗುತ್ತವೆ. ಉದಾ. ಹಾಗೆ ಮಾಡು, ಹೀಗೆ ಬರೆ, ಮುಂಚೆ ಹೋಗು.

GRAMMATICAL TERMS.

ವ್ಯಾಕರಣದಲ್ಲಿ ಪ್ರಯೋಗಿಸುವ ಮುಖ್ಯಶಬ್ದಗಳು.

Letter.	ವರ್ಣ
Vowel.	ಸ್ವರ
Short.	ಹ್ರಸ್ವ
Long.	ದೀರ್ಘ
Consonant.	ವ್ಯಂಜನ
Junction of Letters	ಸಂಧಿ
Elision	ಲೋಪ
Addition	ಆಗಮ
Change	ಆದೇಶ
Syllable	ಅಕ್ಷರ
Word (*Part of Speech*)	ಶಬ್ದ
Pure Canarese	ದೇಶ್ಯ
Pure Sanscrit.	ತತ್ಸಮ
Corrupted Sanscrit	ತದ್ಭವ
Foreign Words.	ಅನ್ಯದೇಶ್ಯ
Ungrammatical Forms.	ಗ್ರಾಮ್ಯ
Uninflected Word (Crude state)	ಪ್ರಕೃತಿ
Inflected Word	ಪದ
Affix	ಪ್ರತ್ಯಯ
Sentence	ವಾಕ್ಯ

GRAMMATICAL TERMS.

NOUN.	ನಾಮವಾಚಕ
Gender.	ಲಿಂಗ
Masculine.	ಪುಲ್ಲಿಂಗ
Feminine.	ಸ್ತ್ರೀಲಿಂಗ
Neuter.	ನಪುಂಸಕಲಿಂಗ
Number.	ವಚನ
Singular	ಏಕವಚನ
Plural	ಬಹುವಚನ
Case	ವಿಭಕ್ತಿ
Nominative	ಪ್ರಥಮೆ
Accusative	ದ್ವಿತೀಯೆ
Instrumental	ತೃತೀಯೆ
Dative	ಚತುರ್ಥಿ
Ablative	ಪಂಚಮಿ
Genitive	ಷಷ್ಠಿ
Locative	ಸಪ್ತಮಿ
Vocative	ಸಂಬೋಧನೆ
Declension	ರೂಪ
Noun of Relationship	ಬಂಧುವಾಚಕ
ADJECTIVE.	ಗುಣವಾಚಕ
Numeral.	ಸಂಖ್ಯಾವಾಚಕ
PRONOUN.	ಸರ್ವನಾಮ
VERB.	ಕ್ರಿಯಾಪದ
Root.	ಧಾತು
Agent, (Nom. to the Verb.	ಕರ್ತೃ

Object, (Obj. after the Verb.)	ಕರ್ಮ
Person	ಪುರುಷ
First.	ಉತ್ತಮ
Second	ಮಧ್ಯಮ
Third	ಪ್ರಥಮ
Inflected Forms of the Verb.	ಆಖ್ಯಾತರೂಪಗಳು
Mood	ರೂಪ
Indicative	ನಿಶ್ಚಯರೂಪ
Subjunctive	ಸಂಶಯರೂಪ
Imperative	ವಿಧಿ
Negative	ನಿಷೇದ
TENSE.	ಕಾಲ
Present	ವರ್ತಮಾನ
Past.	ಭೂತ
Future.	ಭವಿಷತ್ತು
Uninflected Forms of the Verb.	ಅವ್ಯಯರೂಪಗಳು
Infinitive Mood.	ಭಾವರೂಪ
Participle.	ಕ್ರಿಯಾನ್ಯೂನ
Gerund.	ಶಬ್ದನ್ಯೂನ
Compound Gerund.	ಸಂಯುಕ್ತ ಶಬ್ದ ನ್ಯೂನ
Transitive (or Active) Verb.	ಸಕರ್ಮಕ್ರಿಯಾ ಪದ
Intransitive Verb.	ಅಕರ್ಮಕ್ರಿಯಾ ಪದ

GRAMMATICAL TERMS.

Regular Verb. - - -	ಕ್ರಮವಾದ ಕ್ರಿಯಾಪದ
Irregular —— - - -	ವಿಕಾರವಾದ ಕ್ರಿಯಾಪದ
Defective—— - - -	ಉಪಪದ ಕ್ರಿಯಾಪದ
Reflexive—— - - -	ಸ್ವಾರ್ಥಕ್ರಿಯಾಪದ
Passive —— - - -	ಕರ್ಮಕ್ರಿಯಾಪದ
Causal —— - - -	ಪ್ರೇರಣಾಕ್ರಿಯಾಪದ
INDECLINABLE WORDS. -	ಅವ್ಯಯಗಳು
Postposition. - - -	ವಿಭಕ್ತ್ಯವ್ಯಯ
Adverb.	
Joined to Nouns or Pronouns.	ಗುಣವಿಶೇಷಣ
—— Verbs - -	ಕ್ರಿಯಾವಿಶೇಷಣ
Conjunction. - - -	ಸಂಬಂಧಕಾವ್ಯಯ
Interjection	
calling another - -	ಸಂಬುದ್ಧ್ಯವ್ಯಯ
exclamation of wonder, &c.	ಅತಿಶಯಾವ್ಯಯ
Derivative Noun. - - -	ತದ್ಧಿತಪ್ರತ್ಯಯ
Verbal Noun. - - -	ಕ್ರಿಯಾವಾಚಕ. ಕೃತ್ಪ್ರತ್ಯಯ
Compound Noun. - - -	ಸಮಾಸಪದ

GRAMMATICAL TERMS.

SYNTAX. - - -	ಪ್ರಯೋಗ
Parsing - - - -	ಪದವಿಭಾಗ ಮಾಡು ವದು
PROSODY. - - -	ಕವಿತ್ವಲಕ್ಷಣ
Metre. - - - -	ಛಂದಸ್ಸು
Verse. - - -	ಶ್ಲೋಕ
Line of a Verse. - - -	ಪಾದ
Rhyme. - - -	ಪ್ರಾಸ

ಸಂಪೂರ್ಣ.

ELEMENTS

OF

CANARESE GRAMMAR.

By Rev. C. CAMPBELL, B. A.
MYSORE.

ಕನ್ನಡ ವ್ಯಾಕರಣಸಾರವು.

ಮೈಸೂರಿನಲ್ಲಿರುವ
ಕೇಂಬಲ್ ಅಯ್ಯರ್ವರು ಬರೆದದ್ದು.

BANGALORE:

PRINTED FOR THE SCHOOL BOOK SOCIETY,

AT THE WESLEYAN MISSION PRESS.

1849.

3d. Ed.] [1000 *Cop.*